THE BOOK WAS DRENCHED

Damage Book

TEXT FLY WITHIN THE BOOK ONLY

UNIVERSAL LIBRARY
OU_198582
UNIVERSAL LIBRARY

# ಯಶೋಧರಾ

ಶ್ರೀನಿವಾಸ

ಸತ್ಯಶೋಧನ ಪುಸ್ತಕ ಭಂಡಾರ
ಬೆಂಗಳೂರು ನಗರ

ಬೆಲೆ ೮ ಆಣೆ

ಬೆಂಗಳೂರು ಪ್ರೆಸ್, ಮೈಸೂರು ರೋಡ್

ಬೆಂಗಳೂರು ಸಿಟಿ

೧೯೩೩

*All rights reserved*

# ಮುನ್ನುಡಿ

ಸಿದ್ಧಾರ್ಥನು ಬುದ್ಧನಾದ ಕೆಲವು ವರ್ಷಗಳನಂತರ ಹುಟ್ಟಿದೂರಿಗೆ ಬಂದಾಗ ಉಳಿದೆಲ್ಲ ನೆಂಟರೂ ಬಳಿಗೆ ಹೋಗಿ ದರ್ಶನ ತೆಗೆದುಕೊಂಡರು; ಅವರ ಸತಿ ಯಶೋಧರೆ ಹೋಗಲಿಲ್ಲ. ಹೋಗಿ ನೋಡಬಾರದೇ ಎಂದು ಇಷ್ಟರು ಕೇಳಲಾಗಿ ಆಕೆ, ಅವರು ನನ್ನನ್ನು ಒಂದು ವಸ್ತುವೆಂದು ಎಣಿಸುವುದಾದರೆ ತಾವೇ ಇಲ್ಲಿಗೆ ಬರುತ್ತಾರೆ, ಎಂದರಂತೆ. ಈ ಮಾತು ಗುರುವಿಗೆ ತಿಳಿಯಿತು; ಅವರು ಪತ್ನಿಯ ಬಳಿಗೆ ಬಂದು ಮಾತನಾಡಿಸಿದರು. ಹೀಗೆಂದು ಇತಿಹಾಸದಲ್ಲಿ ಹೇಳಿದೆ. ಈ ಸಂದರ್ಭವನ್ನು ಚಿತ್ರಿಸುವುದೇ ಈ ನಾಟಕದ ಉದ್ದೇಶ.

ಬುದ್ಧನ ಕಾಲ ದೇಶ ಉಪದೇಶಗಳನ್ನು ವಸ್ತುವಾಗಿ ಉಳ್ಳ ಒಂದು ಪುಸ್ತಕವನ್ನು ಬರೆಯಬೇಕೆಂದು ನನಗೆ ಕೆಲವು ವರ್ಷಗಳ ಹಿಂದೆ ಒಂದು ಯೋಚನೆಯಿತ್ತು. ಅದು ನಡೆಯಲಿಲ್ಲ. ಉಪಯೋಗಿಸದ ಆ ವಸ್ತುವಿನ ಒಂದು ಮುರುಕು ಸಾರಿಪುತ್ರನ ಕಡೆಯ ದಿನಗಳು ಎಂಬ ಸಣ್ಣ ಕತೆಯಾಯಿತು. ಇನ್ನೊಂದು ಮುರುಕು ಈಗ ಈ ನಾಟಕವಾಗಿದೆ. ಕಳೆದುಕೊಂಡ ಒಡವೆಯನ್ನು ಮರಳಿ ಕಂಡ ಒಡೆಯನಂತೆ ನಾನು ಇದರಿಂದ ಸಂತುಷ್ಟನಾಗಿದೇನೆ. ನನ್ನ ಸಂತೋಷದ ಸ್ವಲ್ಪ ಭಾಗವಾದರೂ ಇದನ್ನು ಓದುವವರಲ್ಲಿ ಉಂಟಾಗಬಹುದೆಂದು ನಂಬಿದೇನೆ.

ಈ ನಾಟಕವನ್ನು ರಂಗದಲ್ಲಿ ನೋಡಬೇಕೆಂದು ಆಸೆಯಿದೆ. ಎಂದಿನಂತೆ ಮಿತ್ರರ ನೆರವು ದೊರೆತರೆ ಇದೂ ಇಷ್ಟರಲ್ಲೇ ಆಗಬಹುದು.

ಬೆಂಗಳೂರು, ಶ್ರೀಮುಖ ಸಂ||
ವೈಶಾಖ ಬಹುಳ ದಶಮೀ ಶುಕ್ರವಾರ.

**ಶ್ರೀನಿವಾಸ.**

## ಶ್ರೀನಿವಾಸ ರಚಿತ

---

ಕೆಲವು ಸಣ್ಣ ಕತೆಗಳು
ಬಿನ್ನಹ (ಗೀತೆಗಳು)
ಶಾಂತಾ (ಸಣ್ಣ ದೃಶ್ಯ)
ಸಾವಿತ್ರಿ ( ,, )
ಸಣ್ಣ ಕತೆಗಳು
ಸಾಹಿತ್ಯ (ಉಪನ್ಯಾಸ)
ಅರುಣ (ಪದ್ಯಗಳು)
ವಿಮರ್ಶೆ ೧ (ಲೇಖನಗಳು)
ಉಷಾ (ಸಣ್ಣ ದೃಶ್ಯ)
ಸುಬ್ಬಣ್ಣ (ಕತೆ)
ತಾಳೀಕೋಟೆ (ಐತಿಹಾಸಿಕ ದೃಶ್ಯ)
ವಿಮರ್ಶೆ ೨ (ಲೇಖನಗಳು)
ನಾಲ್ಕು ಸಣ್ಣ ಕತೆಗಳು
ಕನ್ನಡದ ಸೇವೆ (ಭಾಷಣ)
ಮಂಜುಳಾ (ಸಾಮಾಜಿಕ ದೃಶ್ಯ)
ತಾವರೆ (ಪದ್ಯಗಳು)
ಕರ್ಣಾಟಕದ ಜನತೆಯ ಸಂಸ್ಕೃತಿ
ಚೆಲುವು (ಪದ್ಯಗಳು)
ಶಿವ ಛತ್ರಪತಿ (ಐತಿಹಾಸಿಕ ದೃಶ್ಯ)
ವಿಮರ್ಶೆ ೩ (ಲೇಖನಗಳು)

---

ಈ ಪುಸ್ತಕಗಳು ದೊರೆಯುವ ಸ್ಥಳಗಳು—

ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು

ಎಂ. ಎಸ್. ರಾವ್ ಕಂಪೆನಿ, ದೊಡ್ಡಪೇಟೆ, ಬೆಂಗಳೂರು

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ದಿ ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಶ್ರೀ ಶಂಕರ ಕರ್ಣಾಟಕ ಪುಸ್ತಕ ಭಾಂಡಾರ, ಧಾರವಾಡ

# ಯಶೋಧರಾ

# ಪಾತ್ರಗಳು

| | |
|---|---|
| ಯಶೋಧರೆ . . . | (ಸಿದ್ಧಾರ್ಥನ ಹೆಂಡತಿ) |
| ರಾಹುಲ . . . | ( ,, ಮಗ ) |
| ರಾಜ . . . | ( ,, ತಂದೆ ) |
| ಅಂಬಿಕೆ . . . | (ಯಶೋಧರೆಯ ಪರಿಚಾರಿಕೆ ) |
| ಬುದ್ಧ (ಸಿದ್ಧಾರ್ಥ) | |
| ಆನಂದ<br>ಮಾನಂದ<br>ಸಾರಿಪುತ್ರ . . . | (ಬುದ್ಧನ ಶಿಷ್ಯರು) |
| ಅಂಬಾಪಾಲಿ . . . | ( ,, ಶಿಷ್ಯಳು) |
| ಮಲ್ಲರಾಜ . . . | ( ಲಿಚ್ಛವಿಯ ರಾಜ ) |
| ಧರ್ಮಮಲ್ಲ<br>ದಾನಮಲ್ಲ . . . | ( ಮಲ್ಲರಾಜನ ಮಕ್ಕಳು ) |
| ಕೌಂಡಿನ್ಯ<br>ಕೌಶಿಕ<br>ಭಾರದ್ವಾಜ<br>ವಾಸಿಷ್ಠ<br>ಗೌತಮ<br>ಜಾಬಾಲಿ . . . | ( ಕಪಿಲವಸ್ತುವಿನ ಬ್ರಾಹ್ಮಣರು ) |
| ಧನಪಾಲ | |

ಯುವತಿ, ಮುದುಕಿ, ಒಂದು ಮಗು, ಹುಡುಗರು
ಸೇವಕರು, ಪುರಜನರು, ಇತ್ಯಾದಿ

# ಯಶೋಧರಾ

## ಸ್ಥಾನ ೧

ಕಪಿಲವಸ್ತುವಿನ ಅರಮನೆಯಲ್ಲಿ ಯಶೋಧರೆಯ ಅಂತಃಪುರ.
ಯಶೋಧರೆ ಒಬ್ಬಳೇ ಚಿಂತಾಮಗ್ನಳಾಗಿ ಕುಳಿತಿರುವಳು.
ಎದುರಿಗೆ ಒಂದು ಪೀಠದಮೇಲೆ ಒಂದು ಪಟ ಇದೆ.

ಯಶೋ — ಅಂಬಿಕೇ ಶಾರಿಕೇ

ಅಂಬಿಕೆ — ಮಹಾಜೀ ಬಂದೆ.

ಯಶೋ — ರಾಹುಲನ ಪಾಠವಿನ್ನೂ ಮುಗಿಯಲಿಲ್ಲವೆ?
ಏಕೆ ಇನ್ನೂ ಅವನು ಬರಲಿಲ್ಲ?

ಅಂಬಿಕೆ — ಆಗಲೇ
ಇತ್ತ ಬಂದರು ತಾಯಿ. ಬರುವಾಗ ಶಾರಿಕೆ
ಹೂವ ತರಲೆಂದು ನಂದನಕೆ ಹೊರಟಿರಲಾಗಿ
ತಾಯ್ಗೆ ತಾನೂ ಹೂವ ತಹೆನೆಂದು ಅವಳೊಡನೆ
ಉದ್ಯಾನದೆಡೆಗೆ ಹೋದರು.

ಯಶೋ — ಒಳ್ಳಿದಾಯಿತು.
ಇಲ್ಲಿ ಬಾ, ಆ ಪಟವನಿಲ್ಲಿ ತಂದಿರಿಸು.

(ಅಂಬಿಕೆ ಪಟವನ್ನು ಯಶೋಧರೆಯ ಪೀಠದಬಳಿ ತಂದಿರಿಸುವಳು.
ಯಶೋಧರೆ ಅದನ್ನೇ ನೋಡುತ್ತ ಕಣ್ಣೀರನ್ನಿಕ್ಕುವಳು.)

ಅಂಬಿಕೆ — ಮಹಾಜೀ.

(ಯಶೋಧರೆ ಮಾತನಾಡುವುದಿಲ್ಲ.)

ಮಹಾಜೀ
(ಎಂದು ಕಣ್ಣೀರನ್ನೊರಸುವಳು)
ಏನು ಇದು? ಏಕೆ?

ಯಶೋ — ಏಕೆಂದು ಕಾಣೆಯಾ ಅಂಬಿಕೆ? ಕೇಳುವೆಯ?
ಹತ್ತುವರುಷದ ದಿವಸ ಕರಗಿ ಮರುಗಿದ ಹದನ
ಹೊಸತಾಗಿ ಹೇಳಲೇನೇ?

ಅಂಬಿಕೆ — ಅಮ್ಮಾಜಿ
ಇಂದವರ ಮಾತೇನು? ನಮ್ಮ ಜೀವದ ಜೀವ
ನಮ್ಮೆಲ್ಲರನು ತೊರೆದು ತೆರಳಿ ಬಹುದಿನವಾಯ್ತು.
ಹಳದಾದ ಬೇನೆಯನು ಇಂತು ನೆನೆಯುತ ಇಂದು
ಹೊಸದ ಮಾಡುವಿರೇಕೆ? ನೀವಿಂತು ನೋಯುತಿರೆ
ನಾ ನೋಡುತಿರಲಾರೆ.

ಯಶೋ — ಅಂಬಿಕೆ, ಅಂಬಿಕೆ,
ಈ ಒಂದು ಹಳೆಯ ನೋವನು ತಡೆಯುವೆನೆ ನನಗೆ
ತ್ರಾಣವಿಲ್ಲ. ನಾನು ಸೋತೆನೇ ಅಮ್ಮಾ.
ನಾನು ಬದುಕಿರುವೆನೆಂತೋ ನಾನೆ ಕಾಣೆನೇ.
ದೇಹವನು ಕೊಟ್ಟ ದೇವರು ಉಸಿರನೆಳೆಸುತಿರೆ
ಉಸಿರೆಳೆಯುತಿಹೆನಮ್ಮ. ಊಟ ಉಪಚಾರಗಳು
ಮೊದಲಿಂದ ನಡೆದಂತೆ ನಡೆಯುತಿರೆ ನಾನವನು
ವಾಡಿಕೆಯ ಮಹಿಮೆಯಲಿ ಒಪ್ಪಿ ನಡೆಯುತಲಿಹೆನು.
ಒಡಲ ಹೊರೆಯುತಲಿಹೆನು, ಏಕೆಂದು ಅರಿಯದೆ.
ಒಮ್ಮೊಮ್ಮೆ ಬಾಳಿನೆಳೆ ಎಳೆಯುತಿಹ ರೀತಿಯನು
ನಿಂತು ನಿಟ್ಟಿಸಿ ನೋಡಿ ಇದು ಏನೊ ಕನಸೆಂದು
ತೋರಿ ಬೆಚ್ಚುವೆನಮ್ಮ. ಯಾವುದೋ ಬಾಳು ಇದು,
ಯಾರೊ ಬಾಳುತಲಿಹರು, ನಾನು ನೋಡುತಲಿಹೆನು,
ಎಂದು ತೋರಿಹುದೆನಗೆ ಅಂಬಿಕೆ. ಹಳದಾದ
ಈ ನನ್ನ ನೋವು ದಿನದಿನಕೆ ಹೊಸಹೊಸತಾಗಿ,
ಉಪವನದ ಅಶ್ವತ್ಥ ನೆಲೆಯ ಕಟ್ಟೆಯ ಕೆದರಿ

ಬೇರೂರಿ ಬೆಳೆದಂತೆ, ನನ್ನ ಜೀವನ ನೀಳ
ಬೆಳೆಯುತಿರುವುದು ತಾಯಿ. ತಡೆಯಲಾರೆನು ನಾನು;
ತಡೆಯಲಾರೆ; ನಾನು ತಡೆಯಲಾರೆ.

ಅಂಬಿಕೆ — ಮಾಜಿ,
ನನ್ನಾಣೆ ಸುಮ್ಮನಿರಿ; ನಮ್ಮ ರಾಹುಲನಾಣೆ.
ತಡೆಯಲಾರೆ ಎನಲು ತಡೆಯಲಾರದು ದೇವಿ;
ನಮ್ಮ ನೋವನು ನೋಡಿ ನೋವವರ ನಲುವಾಗಿ
ಮನವ ಬಿಗಿಹಿಡಿವೆನೆನೆ ತಾನಾಗಿ ತಡೆಯುವುದು.
ಆ ಬಾಲಕನ ನೋಡಿ ಸುಮ್ಮನಿರಿ.

ಯಶೋ — ಅಂಬಿಕೆ
ಬಾಲಕನ ನೋಡಿ ತಣಿಯದೆ ಮನದೆ ತಪಿಸುವೆನು.
ನನ್ನೆರೆಯನಾ ರೂಪು ನನ್ನೆರೆಯನಾ ನೋಟ
ನನ್ನ ಮನದಾಣ್ಮನಾ ನಡೆ ಎಲ್ಲ ಇಲ್ಲಿಹವು.
ಇವನ ಹಿಡಿದಿರುವಂದು ಅವನಿಲ್ಲದುದ ನೆನೆದು
ನೋಯುವೆನು ಬೇಯುವೆನು; ಅವನಿದ್ದ ಕಾಲದಲಿ
ಚೆನ್ನಾಗಿ ನೋಡದಿದ್ದೆನೆ ಎಂದು ದುಃಖಿಪೆನು.
ಬಾಲಕನ ನೋಡಿದೊಡೆ ತಣಿದಿರುವ ಬಗೆ ನನಗೆ
ಇಲ್ಲವಾಯಿತು, ಅಂಬಿಕೆ.

ಅಂಬಿಕೆ — ಮಾಜಿ, ನೊಂದಿರಿ.
ನಾನರಿಯೆನೆ?

ಯಶೋ — ಕೇಳು, ಅಂಬಿಕೆ, ನೀನರಿಯೆ.
ಎಂತರಿಯಬಹುದು ಇನ್ನೊಬ್ಬರೆನ್ನೀ ನೋವ?
ಆಣ್ಮ ನನ್ನನು ಬಿಟ್ಟು ಹೊರಟುಹೋದುದು ತಿಳಿದ
ಕ್ಷಣದಲ್ಲಿ ನನ್ನ ಮನದಲಿ ಹುಟ್ಟಿದಾ ಬೇನೆ
ಕಾವು ನೋವುಗಳು ಮನೆಯನು ಮೊದಲು ತುಂಬಿದುವು;
ತುಂಬಿದುವು ನಗರವನು, ಉಪವನೋದ್ಯಾನವನು;

ತುಂಬಿದುವು ಸಾಗರದ ಕೂಪವನು ; ಆಗಸದ
ಆಳವರಿಯದ ಅಂತರಾಳವನು ತುಂಬಿದುವು ;
ಸೂರ್ಯಮಂಡಲದಿಂದ ಹೊರಹೊಮ್ಮಿ ಬರುತಿರುವ
ಹೊನ್ನ ಕಿರಣದ ನಡುವೆ ಉಕ್ಕಾಗಿ ಸೇರಿದುವು ;
ಲೋಕಕ್ಕೇ ಶಾಂತಿಯನು ತರುವ ಚಂದ್ರನ ಕಾಂತಿ
ನನ್ನೊಳಗ ಬೆಳಗದಂತೊಲೆನ್ನ ಹೃದಯದ ಮುಷ್ಟೆ
ಕತ್ತಲೆಯ ಕೋಟೆಯನು ಕಟ್ಟಿದುವು. ಇಷ್ಟು ದಿನ
ಇಂತು ನನ್ನನು ಕವಿದ ದುಃಖ ನಿನ್ನೆಯ ಇರುಳು
ಮರಳಿ ಮುಸಗಿತು, ನನ್ನ ಆತ್ಮವನು ಮುಳುಗಿಸಿತು.

ಅಂಬಿಕೆ — ಅಮ್ಮಾಜಿ, ನನ್ನಾಣೆ. ಏನಿದೇನಿದು ಮಾತು !
ಎಂತ ಬೇನೆಯನಾದರೂ ನುಂಗಿಕೊಂಡಿರುವ
ನಿಮ್ಮಿಂದ ಇಷ್ಟು ಮಾತನು ನುಡಿಸುತಿಹುದೇನು ?
ಏನಾಯ್ತು ? ಹೇಳಿರಿ. ಮನಕೆ ಧೈರ್ಯವ ತನ್ನಿ.

ಯಶೋ — (ಸಮಾಧಾನ ಮಾಡಿಕೊಂಡು)
ಕಳೆದಿರುಳು ನಾನೊಂದು ಕನಸ ಕಂಡೆನೆ ತಾಯಿ ;
ಅದರಿಂದ ಇನಿತು ಕಳವಳಕೆ ನಾ ಸಿಲುಕಿಹೆನು.
ಹೇಳುವುದಕೇ ಬಾಯಿಬರದು.

ಅಂಬಿಕೆ — ಏನಮ್ಮ ಅದು ?

ಯಶೋ — ಅದು ನನ್ನ ಮನಸಿಗೆ ಅಮಂಗಳವ ಸೂಚಿಸಿತು.
ಅದರಿಂದ ನೆನೆವುದಕೆ ಕೂಡ ಒಪ್ಪದು ಜೀವ.
ಏನು ಕನಸೋ ! ಇನ್ನು ಏನೇನು ಬರುವುದೋ !
ಮಾವನನು ಅಂದೆ ಕೇಳಿದೆನು : ನನ್ನಾಣ್ಮನನು
ಹಿಂಬಾಲಿಸುವೆನು, ಅವನೆಲ್ಲಿದ್ದರಲ್ಲಿಹೆನು,
ನನಗೆ ಆಣತಿಯ ನೀಡೆಂದಂದೆ ಬೇಡಿದೆನು.
ಬೇಡವೆಂದರು, ಮೋಡಿ ಬೇಡೆಂದು ಬೇಡಿದರು ;
ಬಾಲಕನ ನಲುವಾಗಿ ಸುಮ್ಮನಿರು, ನಿನ್ನರಸು

ಇಲ್ಲಿಗೇ ಬರಬಹುದು ತಾಳಮ್ಮ, ಎಂದರು;
ನನ್ನ ವಯಸನು ನೋಡು, ನಿನ್ನ ನೋವಲಿ ನನಗೆ
ಭಾಗವಿರುವುದ ನೋಡು, ಸಹಿಸಮ್ಮ, ಎಂದರು.
ಮನದ ದನಿ ಇನ್ನೊಂದು ಮಾತನುಸುರುತಲಿತ್ತು:
ಹೋಗು ಅವನಿರುವೆಡೆಗೆ; ನಿಲ್ಲದಿರು ಇಲ್ಲಿ;
ಅವನಿರುವ ಹಳುವ ನಗರೋಪವನ ನಂದನ,
ಅವನಿಲ್ಲದಿಹ ನಗರ ನಿನ್ನ ಪಾಲಿಗೆ ಹಳುವ;
ಸೀತೆಯನು ಮರೆತೆಯಾ? ಸಾವಿತ್ರಿ ದಮಯಂತಿ
ಚಂದ್ರಮತಿಯರ ಮಾತ ಕಾಣೆಯಾ? ನಿಲ್ಲದಿರು;
ನಿಲ್ಲದಿರು ಇಲ್ಲಿ; ನಿಲ್ಲದಿರು ಇಲ್ಲಿ.
ಎಂದು ಹೇಳಿದ ಮನದ ಕೂಗ ಕೇಳದೆ ನಾನು
ಹಿರಿಯರಾಣತಿಯೆಂದು ನಿಂತೆನೀಹಳುವದಲಿ;
ಹಳುವದಲಿ ನಿಂತು ಬಾಲಕನ ಸಾಕಿದೆನು;
ಅವನು ಬೆಳೆದುದನು ನೋಡಿದೆನು, ಹಿಂದಣ ನೋವ
ತುಸ ಮರೆತ ರೀತಿಯಲಿ ಕಂಡೆನು. ಇಂತಿರಲು
ಮರೆವೆಯೇತಕೆ ಎಂದು ಮನವಿಂತು ಕೆರಳಿ
ಕನಸ ಕಂಡಿತು ಅಂಬಿಕೆ; ಕನಸ ಕಂಡಿತು.

ಅಂಬಿಕೆ — ಏನಮ್ಮ ಈ ಕನಸು?

ಯಶೋ — ಕೇಳಬೇಕೇನೇ?
ಕೇಳಿ ನನ್ನಂತೆ ನೀನೂ ನಡುಗಬೇಕೇ?
ಹೇಳುವೆನು ಕೇಳು. ನಿನ್ನೆಯ ರಾತ್ರಿ ನಿದ್ರೆಯಲಿ
ನಾನೊಂದು ತೋಟದಲಿ ನಡೆಯುತಿರುವಂತಿರಲು
ಒಂದು ಹಿರಿಯಾಲದಡಿಯಲಿ ಸೊಗಸ ತಾಣದಲಿ
ನಿಂದೆನೊಂದರೆನಿಮಿಷ. ನನ್ನ ಬದಿಯಲಿ ವೃಕ್ಷ
ಒಂದು ಬಿಳಲನು ಬಿಟ್ಟು ದೂರ ಸರಿಯಿತು ತಾಯಿ.
ಬಿಳಲ ನೋಡುವ ಭರದಿ ಮರ ಸರಿದುದರಿಯದೆ

ನಾನಿತ್ತಲೇ ಮನವನೆಟ್ಟು ಕೌತುಕದಿಂದ
ಕುಡಿ ತಳಿರ ನೋಡಿ ಮೈಯ್ ಮರೆದು ಆಹಾ ಎಷ್ಟು
ಚೆಂದವಾಗಿಹುದು ಎನ್ನುತಲಿರಲು, ಏನೋ
ಆಯಿತು ; ಏನೆಂದು ನಾಕಾಣೆ ; ಅಂಜಿ
ಅತ್ತಿತ್ತ ನೋಡಿದೆನು ; ದೂರ ಸರಿದಿರ್ದ ಮರ
ಒಂದು ಕೈ ನೀಡಿ ಎಳೆಯನಿಗೆ ಸನ್ನೆಯಮಾಡಿ
ಬಾ ಎಂದು ಕರೆಯುತಿತ್ತು. ಇತ್ತ ತಿರುಗಿದೆನು.
ಎಳೆಯಮರ ನನ್ನ ಬಿಟ್ಟದರೆಡೆಗೆ ನಡೆಯಿತು.
ಹಾ ಎಂದು ಕೂಗಿ ನಿದ್ದೆಯ ತಿಳಿದು ಎದ್ದೆನು.
ಬಾಲಕನು ಮಲಗಿರುವ ಹಾಸಿಗೆಯ ಒಳಿ ಹೋಗಿ
ಅವನು ಇರುವನೊ ಇಲ್ಲವೋ ಎಂದು ನೋಡಿದೆನು.
ಹಿಂದೊಮ್ಮೆ ಇಂಥದೇ ಕನಸು ಒಂದಾಗಿತ್ತು.
ನಿದ್ದೆ ತಿಳಿದೆದ್ದೆನು, ಪ್ರಾಣೇಶನಿರಲಿಲ್ಲ.
ಇಂದು ನೋಡಿದ ವೇಳೆ ಎಳೆಯನಿರುವುದು ಕಂಡು,
ನಾಳೆ ಬರುವುದು ಬರಲಿ ಇಂದಿವನ ಕಂಡೆನೇ
ಇದೆ ಸುಕೃತ ಎಂದು ಮೈಯ್ ಮರೆದು ಅವನಿಹ ಮಾತು
ಮರದ ಬಳಲಿನ ಕನಸ ರೀತಿ ಕನಸಲ್ಲೆಂದು
ಮನಕೆ ನಿಶ್ಚಯಮಾಡಿಕೊಂಡಲ್ಲೆ ಕುಳಿತೆನು ;
ಉದಯದಿಂದಲು ಅವನು ಕಣ್ಣೆ ಮರೆಯಾಗುವುದೆ
ಮನದೆ ಭೀತಿಯ ಚೆದರುತಿಹುದು. ಏನಾಗುವುದೊ
ಏನಗೆಯ್ವೆನೊ ಕಾಣೆ ಅಂಜಿಕೆ.

ಅಂಬಿಕೆ — ಅಮ್ಮಾಜಿ,
ಭೀತಿಯನು ಬಿಡಿ; ನಮ್ಮ ಬಾಲಕನು ಎತ್ತಲೂ
ಹೋಗಿಹನಲ್ಲ.

ಯಶೋ — ಆಹ, ಅಂಬಿಕೇ, ಎನ್ನಾಣ್ಮ
ಎನ್ನನುಳಿದೆಲ್ಲಿಗಾದರು ಹೋಗಬಹುದೆಂದು

ನಾನೆಂದು ತಿಳಿದೆನೇ? ಯಾವೊಂದು ಕಾರ್ಯದಲಿ
ನನ್ನ ನುಳಿದಾತ ನಡೆದುದೆ ಇಲ್ಲ. ಸತ್ಯವಿದು.
ಆಹಾರ, ಕೇಳಿ, ವಿಹಾರ, ಶಯನಾಸನ,
ಎಲ್ಲ ಸುಖಗಳಲಿ ಎಲ್ಲಾ ಭೋಗಭಾಗ್ಯದಲಿ,
ನನ್ನ ಸುಖವನು ಮೊದಲು ನೋಡಿ ತಾನುಖಿಸುವರು;
ನನ್ನ ಇಷ್ಟವ ಕೇಳಿ ಅನುಸರಿಸಿ ನಡೆಯುವರು.
ಕೊನೆಕೊನೆಗೆ ಎಷ್ಟು ಬೆಳೆದಿತ್ತು ಆ ಪ್ರೇಮ!
ನನ್ನಿಂದ ಇವರಿಷ್ಟ ವಿನು ತಪ್ಪುವುದೋ
ಎಂತೊ ಎನ್ನುತೆ ನಾನು ನನಗೆ ಇದು ಅದು ಬೇಕು
ಎಂಬ ಮಾತನೆ ಬಿಟ್ಟು ಅವರಿಷ್ಟವೇನೆಂದು
ಊಹಿಸುವ ನೆಲೆಗೆ ಬಂದಿದ್ದೆನು. ಇಂತಿರಲು
ಮೋಡವಿಲ್ಲದ ಆಗಸದಿ ಮೊಳೆದ ಸಿಡಿಲಂತೆ
ಬಂತಾ ಸುಖದ ಅಂತ್ಯ; ಬತ್ತಿತೊಲುಮೆಯ ಚಿಲುಮೆ.
ಶಂಕೆಯಿಲ್ಲದ ಬಾಳನುಳಿದು ಮರೆದರು ಅವರು;
ಈ ಬಾಳ ಶೂನ್ಯಮಾಡಿದರು. ಎಲ್ಲಾ ಸುಖದಿ
ಜೊತೆಗೆ ಕರೆದವರು ಮುಕ್ತಿಯು ಸುಖಕೆ ಒಬ್ಬರೇ
ನಡೆದರಮ್ಮಾ; ನನ್ನ ಬಿಟ್ಟು ಮರೆಯಾದರು.

ಅಂಬಿಕೆ — ನಿಮ್ಮೊಡನೆ ಸಂಸಾರ ಮಾಡುತ್ತ ಬಾಲಕನ
ನೋಡುತ್ತ ರಾಜ್ಯವನು ಆಳುತ್ತ ಇಲ್ಲಿಯೇ
ಮುಕ್ತಿ ಸುಖವನು ಪಡೆದು ಸುಖಿಸುವರೆ ಅವರಿಗೆ
ಪುಣ್ಯವಿಲ್ಲದೆ ಹೋಯಿತು.

ಯಶೋ — ಇದ್ದುದೇ ನನಗೆ?
ಪುಣ್ಯವೇ ಇದು ಮರುಳೆ? ಅವರ ಪುಣ್ಯದ ಮಾತ
ಅವರು ನೋಡಲಿ. ನನ್ನ ಪುಣ್ಯವೇನಾಯಿತು?

ರಾಹುಲ — (ಒಳಗಿನಿಂದ) ಅಮ್ಮಾ

ಅಂಬಿಕೆ — ನಮ್ಮ ಅಣ್ಣಾಜಿಯಮ್ಮಾ.

(ರಾಹುಲನೂ ಶಾರಿಕೆಯೂ ಬರುವರು. ಯಶೋಧರೆ ಬೇಗ ಕಣ್ಣೊರಸಿಕೊಳ್ಳುವಳು)

ರಾಹುಲ — ಅಮ್ಮ
ಇಲ್ಲಿ ನೋಡಮ್ಮ ಇದು ಎಷ್ಟು ಒಳ್ಳೆಯ ಹೂವು!
ನಿನಗಾಗಿ ನಾನೆ ಆರಿಸಿ ತಂದೆನಮ್ಮಯ್ಯ.

ಯಶೋ — ನನ್ನಯ್ಯ, ಹೌದಲ್ಲ! ಎಷ್ಟು ಒಳ್ಳೆಯ ಹೂವು.
ಎಷ್ಟು ಚೆನ್ನಾಗಿಹುದು ಈ ಹೂವು!

ರಾಹುಲ — ಅದು ನೋಡು
ಎಲೆಯ ಮರೆಯಲಿ ಅವಿತುಕೊಂಡು ಕೇಳಿಸದಂತೆ
ನನ್ನ ಹಿಡಿ ನೋಡೋಣ ಎಂದು ಹೇಳುತಲಿತ್ತು.
ಇಣಿಕಿ ನೋಡುತ ಹಿಡಿದುಕೊಳ್ಳುವರೊ ಎನ್ನುತ್ತ
ಆಟವಾಡುತಲಿತ್ತು. ಆಗ ಅದ ಹಿಡಿದೆನು.

ಯಶೋ — ಭಯಪಡುತಲಿಹ ಹೂವ ಹಿಡಿಯಬಾರದು ಅಣ್ಣ.

ರಾಹುಲ — ನಿಜವಾದ ಭಯವಲ್ಲ ಅಮ್ಮಯ್ಯ. ಭಯದಂತೆ
ತೋರಿಸುತ ಆಟಕ್ಕೆ ಕಣ್ಣುಮುಚ್ಚಾಡುವುದು.
ಕಳ್ಳ ಹೂ. ನಮ್ಮ ಶಾರಿಕೆ ಮರದ ಮರೆಯಲ್ಲಿ
ಅವಿತು ಹಾ ಹೂ ಎಂದು ಕರೆವಂತೆ ಕರೆಯುವುದು;
ಹಿಡಿಯದಿದ್ದರೆ ಕೋಪಮಾಡುವುದು. ಅಮ್ಮಯ್ಯ,
ಏನಮ್ಮ ನೀನು ಅತ್ತಿರುವೆ? ಕಣ್ಣೀರೇಕೆ?

ಯಶೋ — ಕಣ್ಣೀರೆ? ಅಂಬಿಕೆ. ಕಣ್ಣು ಏನಾಗಿದೆಯೆ?

ಅಂಬಿಕೆ — ಏನಾಯಿತೋ ಮಾಜಿ. ಧೂಳು ಬಿದ್ದಿರಬಹುದೊ?

ರಾಹುಲ — ನಿನ್ನ ಕಣ್ಣೂ ಕೆಂಪಗಾಗಿದೆ. ಇಬ್ಬರೂ
ಅತ್ತಿರುವಿರಿ. ಅಮ್ಮ ನೀನು ಚಿಂತಿಸಬೇಡ.
ಮೂರುದಿವಸದ ಹಿಂದೆ ತಾತನನು ಕೇಳಿದೆನು.
ಅವರು ಆಗಲಿ ಎಂದು ಹೇಳಿದಾರಮ್ಮಯ್ಯ.
ಅಣ್ಣನನು ಕರೆತರಲು ನಾನೆ ಹೋಗುವೆನಮ್ಮ.

ಯಶೋ — (ಬೆಚ್ಚಿ) ಅಂಬಿಕೇ ಕೇಳಿದೆಯ? ಎರಡನೆಯ ಪುಣ್ಯ?

ಅಂದು ಫಲಿಸಿತು ಮೊದಲನೆಯದು; ಇಂದೀಗ
ಫಲಿಸುತಿದೆ ಇನ್ನೊಂದು.

(ಮಗನನ್ನು ಅಪ್ಪಿಕೊಂಡು)

ಅಣ್ಣಯ್ಯ ಬೇಡ.
ನಿಮ್ಮ ತಂದೆಯನು ಕರೆತರಲು ನಾ ಹೋಗುವೆನು.
ನೀನಿಲ್ಲಿ ತಾತನೆಡೆ ಪಾಠಗಳ ಕಲಿಯುತ್ತ
ಆಟವಾಡುತ ನಾಲ್ಕು ದಿನವಿರಲು ನಾಬಹೆನು.
ನನ್ನಯ್ಯ ನೀಹೋಗಿ ಕರೆತರುವೆನೆನ್ನದಿರು.

ರಾಹುಲ — ಯಾಕಮ್ಮ ಭಯಪಡುವೆ? ಅಣ್ಣ ನಮ್ಮನು ಬಿಟ್ಟು
ಹೊರಟುಹೋದಂತೆ ನಾನೂ ಹೊರಟುಹೋಗುವೆನು
ಮರಳಿ ಬಾರೆನು ಎಂದು ಭಯಪಡುವೆಯೇನಮ್ಮ?
ನಾನಂತು ಮಾಡೆನಮ್ಮಾ; ನೀನು ಅಂಜದಿರು.

ಯಶೋ — ಅಂಬಿಕೆ, ಹೋಗಿ ರಾಜರಿಗೆ ಬಿನ್ನಹ ಮಾಡು;
ಒಂದು ಕ್ಷಣ ಇತ್ತ ದಯಮಾಡಬೇಕೆಂದರುಹು.

(ಅಂಬಿಕೆ ಹೋಗುವಳು)

ಹಾ ನನ್ನ ವಿಧಿಯೇ ಕನಸು ನಿಜವಾಯಿತು.
ನಿಜವೆ ಕನಸಾಯ್ತು; ಬಾಳುವೆ ಮರೀಚಿಕೆಯಾಯ್ತು.

(ಎಂದು ಪಠದ ಅಡಿಗೆ ತಲೆಯಿಟ್ಟು ದುಃಖಿಸುವಳು. ರಾಹುಲನು ಹೂಗಳನ್ನು ತೆಗೆದು ಪಠದ ಮೇಲೆ ಹಾಕುವನು. ತಾಯ ಹೆರಳಿಗೆ ಒಂದು ಹೂವನ್ನಿಟ್ಟು ಸೊಗಸು ನೋಡುವನು. ಅಷ್ಟು ವೇಳೆಗೆ ರಾಜನೂ ಅಂಬಿಕೆಯೂ ಬರುವರು.)

ರಾಜ — ಅಮ್ಮಾಜಿ, ಬಂದಿಹೆನು.

ಯಶೋ — (ಎದ್ದು ಬಂದು ನಮಸ್ಕರಿಸಿ) ಪೀಠವನು ಕೊಳಬೇಕು.
ನಾನು ಬಹುದಿನದಿಂದ ನಿಮ್ಮ ಬೇಡುತಲಿದ್ದೆ.
ಸೋದರಿಯ ಸುತೆಯೆಂದು ಎಳೆತನದಲೇ ನನ್ನ
ಕರೆದುತಂದಿರಿ, ಸಾಕಿ ಸಲಹಿದಿರಿ; ಸೊಸೆಯಾಗಿ
ಮನೆಗೆ ಹೊಗಿಸಿದಿರಿ, ಬಾಳುವೆಯನುದ್ಧರಿಸಿದಿರಿ.

ಕನಸಿನಲಿ ಎಣಿಸಲಾಗದ ಸೌಖ್ಯಗಳ ನಾನು
ನಿಮ್ಮ ಅರಮನೆಯಲ್ಲಿ ಅನುಭವಿಸಿ ಸುಖಿಸಿದೆನು.

ರಾಜ — ನನ್ನ ಅರಮನೆಯಲ್ಲಿ?

ಯಶೋ — ನಮ್ಮ ಅರಮನೆಯಲ್ಲಿ.
ನಿಮ್ಮ ಐಶ್ವರ್ಯದಲಿ ಕಣ ಮಾತ್ರವನು ನನಗೆ
ಇಲ್ಲವೆನ್ನದೆ ನನ್ನ ಪರಿಪಾಲಿಸಿರುವಿರಿ.
ಪತಿಯನಿತ್ತಿರಿ; ಬಾಳ ದೇವರಾಗಿರಲೆಂದು ;
ಪತಿಯನಿನ್ನೊಮ್ಮೆ ನೀಡಿ; ನನ್ನ ರಕ್ಷಿಸಿ.

ರಾಜ — ಏನಮಾಡೆಂದು ಕೇಳುವೆ?

ಯಶೋ — ನಮ್ಮ ಅಣ್ಣಾಜಿ
ತಂದೆಯನು ಕರೆತರಲು ಹೋಗುವೆನು ಎನಲಾಗಿ
ನೀವು ಒಪ್ಪಿದಿರಂತೆ. ನಾನು ನಿಮ್ಮನು ಮೊದಲೆ
ಬೇಡಿಕೊಂಡಿದ್ದೆ. ನಾನವರೆಡೆಗೆ ಹೋಗುವೆನು
ಇವನನಿಲ್ಲಿಯೆ ನಿಲಿಸಿಕೊಳ್ಳಿರಿ.

ರಾಜ — ಅಮ್ಮಾಜಿ
ಬಾಲಕನು ತಂದೆಯನು ಕರೆತರುವೆನೆಂದೆನಲು
ಕೇವಲ ವಿನೋದದಲಿ ಆಗಬಹುದೆಂದೆನು.
ನಮ್ಮ ಕುವರನ ಕರೆದು ತರಬೇಕು ಎನಲಾಗಿ
ಹೋಹ ಬೇಹಿಲ್ಲವೇ? ಎಳೆಯನನು ಕಳುಹುವರೆ?

ರಾಹುಲ — ಏನು ತಾತ, ಮುನ್ನ ಹೋಗಬಹುದೆಂದವರು
ಈಗ ಉಂಟೇ ಎಂದು ಹೇಳುವಿರಿ? ದೊಡ್ಡವರು
ನನಗೊಂದು ಮಾತನಾಡುತ ತಾಯಿ ಕೇಳಿದರೆ
ಬೇರೊಂದು ಮಾತ ಹೇಳುವಿರೊ? ನಾ ಹೋಗುವೆನು
ಅಮ್ಮ ಇಂದಳುತಲಿದ್ದರು. ಅಣ್ಣ ಬಾರದಿರೆ
ಅಳುತಲೇ ಇರುವರು. ನಾಹೋಗಿ ಕರೆತಹೆನು.

ಯಶೋ — ಕೇಳಿದಿರ ಹಸುಳೆಯಾಡುವ ಮಾತ? ನನಗೋ

ನಿನ್ನ ನೋಡಿದ ಒಂದು ಕನಸು ಮನವನು ತುಡುಕಿ
ಉಸಿರಿಂದ ಉಸಿರು ಕಳವಾಗಿ ಚೇತನವೆಲ್ಲ
ಬೆಂಡಾಗಿ ಹೋಗಿಹುದು; ಒಣಗಿ ತರಗಾಗಿಹುದು.

ರಾಜ — ಹೌದು. ಅಂಬಿಕೆ ಕನಸ ಮಾತ ಹೇಳಿದಳೆನಗೆ.
ನಿಜದಿಂದ ಬಂದಿರುವ ನೋವು ಸಾಕಾಗಿರಲು
ಕನಸೊಂದು ಬೇರೆ ನಿನ್ನನು ಹಿಂಸೆಪಡಿಸುತಿದೆ.

ಯಶೋ — ಇಂದು ಇರುಳಾಗುವುದು; ಇನ್ನೇನ ಮಾಡುವ;
ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ
ಹಿಡಿಯುವುದೊ; ಇನ್ನೆನಿತು ತೊಳಲಬೇಕೋ; ಎಂದು
ಚೇತನಗಳೆಲ್ಲ ಭೀತಿಯಲಿ ಕಲಕಿಹವೆನಗೆ.
ನನ್ನನುದ್ಧರಿಸಬೇಕು. (ನಮಸ್ಕರಿಸುವಳು)

ರಾಜ — ಏಳು, ಅಮ್ಮಾಜಿ;
ನಿನ್ನ ದುಃಖವ ನಾನು ಕಾಣೆನೇ? ಏಳಮ್ಮ.
(ಯಶೋಧರೆ ಎದ್ದು ಕುಳಿತುಕೊಳ್ಳುವಳು)
ನೀಬಲ್ಲೆಯಲ್ಲೆ ನಿನ್ನಾಣ್ಮ ಸಂನ್ಯಾಸವನು
ಸ್ವೀಕರಿಸಿ ಇಹನೆಂದು? ನೀಹೋಗಿ ಆತನನು
ನೋಡುವುದು ಸರಿಯಪ್ಪುದೇ?

ಯಶೋ — ಹೋಗಿ ಕೇಳುವೆನು.

ರಾಜ — ಸಂನ್ಯಾಸಿಯಾದವನು ಸತಿಯ ನೋಡುವ ಮಾತು
ಸಂಪ್ರದಾಯಕೆ ವಿರೋಧ.

ಯಶೋ — ಪೂರ್ವದಲಿ ಗಾರ್ಗಿ
ಸಂನ್ಯಾಸದಲಿ ತನ್ನ ಪತಿಯೊಡನೆ ಕಾನನಕೆ
ತೆರಳಿದಳು ಎಂದು ಕೇಳಿಹೆನು. ನಾನಂತೆಯೇ
ಸಂನ್ಯಾಸವನು ಕೊಂಡು ಪತಿಯೆಡೆಗೆ ಸಾರಿದರೆ

ರಾಜ — ಈಗ ನೀನಿಹ ರೀತಿ ಸಂನ್ಯಾಸವಲ್ಲವೆ?

ಯಶೋ — ಆಣ್ಮ ಸಂನ್ಯಾಸಿಯಾಗಿಹರೆಂಬುದನು ನೆನೆವ

ಸಾಧನೆಯ ವೇಷವಿದು. ಇಂದು ನಿಜದಲಿ ನಾನು
ಸಂನ್ಯಾಸವನು ಕೊಂಡು ಪತಿಯೆಡೆಗೆ ಸಾರಿದರೆ

ರಾಜ — ಪತಿಯೆಡೆಗೆ ಸಾರುವರೆ ಸಂನ್ಯಾಸವನು ಕೊಳಲು
ಅದನು ಸಂನ್ಯಾಸವೆನ್ನುವುದೆಂತು ಅಮ್ಮಾಜಿ ?

ಯಶೋ — ನನಗೆ ಕವಿದಿರುವ ಮಂಕನು ನೆನೆಯೆ ನನಗೇ
ನಗೆ ಬರುತಲಿದೆ, ಅಂತೆ ಅಳು ಬರುತಲಿದೆ. ಇನ್ನು
ಏನಮಾಡುವುದೊ ತೋರದು. ಎಂತು ನಡೆಯಲಿ?
ನೀವೆ ಅಪ್ಪಣೆಮಾಡಿ. ಅದರಂತೆ ನಡೆಯುವೆನು.

ರಾಜ — ಕುವರನಿಗೆ ಹೇಳಿಕಳುಹಿಸುವ. ಅವನಿಷ್ಟವನು
ತಿಳಿದು ಅದರಂತೆ ನಡೆಯುವ.

ಯಶೋ — ಆಗಬಹುದು.
ಇಂದೆ ಬೇಹನು ಕಳುಹಿ.

ರಾಜ — ಕಳುಹುವೆನು. ಯಾರಲ್ಲಿ?

ರಾಹುಲ — ತಾತ ಅಣ್ಣನ ನೋಡೆ ಯಾರನೋ ಕಳುಹುವಿರ?
ನಾಹೋಗಿಬರುವೆ. ನನ್ನನು ಕಳುಹಿ.

ಯಶೋ — ಅಣ್ಣಯ್ಯ
ಮೊದಲು ಬೇಹಿನ ಜನರು ಹೋಗಿ ಅವರಿಚ್ಛೆಯನು
ತಿಳಿದು ಮರಳಲಿ. ಮತ್ತೆ ನೀನು ಹೋಗುವೆಯಂತೆ.

ರಾಹುಲ — ಮತ್ತೆ ಹೋಗುವುದಂತೆ ಮತ್ತೆ. ನಾನೊಲ್ಲೆ.
ನಾನೀಗಲೇ ಹೋಗಬೇಕು. ನಿಮಗೇನು ?
ಅಣ್ಣನನು ನೋಡಿಹಿರಿ. ನೋಡಬೇಕೆಂದಾಸೆ
ಅಷ್ಟು ಬಲವಾಗಿಲ್ಲ. ನಾನವರ ನೋಡಿಲ್ಲ.
ಇನ್ನೆಷ್ಟು ದಿನಕೆ ನೋಡುವುದು? ಅಮ್ಮಾಜಿ,
ನಿನಗೆ ಭಯ ಬೇಡಮ್ಮ, ನಾಮರಳಿ ಬಹೆನಮ್ಮ ;
ನಿಜವಾಗಿಯೂ ಬಹೆನು, ಅಲ್ಲಿಯೇ ನಿಲೆನಮ್ಮ ;
ನನ್ನ ಕಳುಹಿಸಮ್ಮ, ಅವರ ನಾಕರೆತಹೆನು.

ತಾತ ನನ್ನನು ಕಳುಹಿ; ನಾಮರಳಿ ಬರುವೆನು.
ಅಣ್ಣನನು ನೋಡಬೇಕೆಂದು ಅವರೊಡನಿದ್ದು
ಮಾತಾಡಬೇಕೆಂದು ನನಗೆ ಬಹು ಆಸೆಯಿದೆ.

ರಾಜ — ಇರಲಿ ಸುಮ್ಮನಿರಣ್ಣ.

ಯಶೋ — ಕನಸು ನಿಜವಾಯಿತು.
ಕನಸಿನಲಿ ಕಂಡ ಹುಲಿ ನಿಜದೊಳೆದುರಿಗೆ ಬಂದು
ಕೊಡು ನಿನ್ನ ಜೀವವನು ಎಂದು ಕೇಳುತಲಿಹುದು.

ರಾಹುಲ — ಅಮ್ಮಾಜಿ, ನಾನು ಬರುವೆನೊ ಇಲ್ಲವೋ ಎಂದು
ನಿನಗೆ ಭಯವಿಹುದಾಗೆ ನನ್ನ ಜೊತೆಯಲಿ ನಮ್ಮ
ಅಂಬಿಕೆಯ ಕಳುಹಮ್ಮ. ನಾವಿಬ್ಬರೂ ಹೋಗಿ
ಅಣ್ಣನನು ಕರೆದೆತಹೆವಮ್ಮ. ಒಪ್ಪಮ್ಮ.

ರಾಜ — ಅಂಬಿಕೆ.

ಅಂಬಿಕೆ — ಸ್ವಾಮಿ.

ರಾಜ — ಬಾಲನಾಡಿದ ಮಾತ
ಕೇಳಿದೆಯ ? ಏನೆಂಬೆ ?

ಅಂಬಿಕೆ — ಕೇಳಿದೆ. ಅಮ್ಮಾಜಿ
ಭಯಪಡುತಲಿಹರು. ತಾವರಿಯದಿಹುದೇನುಂಟು ?

ರಾಜ — ಅಮ್ಮಾಜಿ ಏನೆಂಬೆ? ಅಂಬಿಕೆಯ ಜೊತೆಯಲ್ಲಿ
ರಾಹುಲನ ಕಳುಹಿಸಲು ಧೈರ್ಯವಾಗಿರಬಹುದು.
ಏನಹೇಳುವೆ ?

ಯಶೋ — ನನಗೆ ಯಾವುದೂ ತೋಚದಿದೆ.
ಅವರ ನೋಡುವ ಪುಣ್ಯ ನನ್ನ ಈ ಕಣ್ಣಳಿಗೆ
ಇರುವುದೋ ಇಲ್ಲವೋ ನಾನರಿಯೆ. ಬಾಲಕನು
ತನ್ನ ತಂದೆಯ ನೋಡಬೇಕೆಂದು ಆಶಿಸಲು
ಬೇಡವೆನ್ನುವುದು ಸರಿಯೇ ಎಂದು ಅಂತರ್ಯ

ಸಂದೇಹದೊಳಗಿಹುದು. ಕಳುಹುವುದು ಸರಿಯೆಂದು
ನಿಮಗೆ ತೋರಿದರೆ ಕಳುಹಿರಿ. ಬೇಡವೆನೆ ನಾನು.

ರಾಹುಲ — ಅಮ್ಮಾ ಎಷ್ಟು ಒಳ್ಳೆಯವಳಮ್ಮಾ ನೀನು.
ಅಂಬಿಕೇ, ನಡೆ, ಹೋಗಿ ಅಣ್ಣನನು ಕರೆತರುವ.
ತಾತಾ ನಾ ಹೋಗಿಬರಲೆ? ಅಮ್ಮಾಜೀ
ನಾವು ಹೋಗಿ ಬರೋಣವೇನಮ್ಮ?

ಯಶೋ — ಆಹಾ
ಏನು ಉತ್ಸಾಹವಿದು! ಅಪ್ಪಾಜಿ ಹೋಗಿಬಾ.
ಅಣ್ಣಯ್ಯ ನನ್ನ ಮರೆಯದಿರಣ್ಣ. ನಿಮ್ಮಣ್ಣ
ನಮ್ಮ ಮರೆತರು, ನನ್ನ ಬದುಕೆಲ್ಲ ಬಯಲಾಯ್ತು.
ಅವರು ಬಿಟ್ಟಂತೆ ನೀ ನನ್ನ ಕೈಬಿಡಬೇಡ.
ಹೋಗಿಬಾ, ಹೋಗಿಬಾ; ಅಂಬಿಕೆ, ಜೊತೆಯೊಳಿರು;
ನನ್ನ ಮರೆಯದಿರು.

ಅಂಬಿಕೆ — ನನ್ನಾಣೆ ಮರೆವೆನೆ ತಾಯಿ?

ಯಶೋ — ಮರೆತರೂ ತಪ್ಪಲ್ಲ. ಅದು ನನ್ನ ವಿಧಿ ಎಂಬೆ.

ರಾಜ — ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ.
ನಿನ್ನರಸನೀಗ ಲೋಕಕೆ ಪೂಜ್ಯನೆನಿಸಿಹನು.
ರಾಜ್ಯವಾಳುವುದೆಂಬ ಕಿರಿಯ ಹಿರಿಮೆಯನುಳಿದು
ಜನದ ಜೀವಗಳ ಉದ್ಧರಿಪ ಹಿರಿಹಿರಿಮೆಯನು
ಅಳವಟ್ಟು ರಾಜ ಅಧಿರಾಜ ವೃಂದಗಳಿಂದ
ಓಲೈಸಿಕೊಳ್ಳುತ್ತ ಚಕ್ರಾಧಿಪತಿಯಂತೆ
ನಿಂದಿಹನು. ಏಕೆ ಚಿಂತಿಸುವೆ? ಈ ಬಾಲಕನು
ನಿನ್ನ ಈ ಹತ್ತುವರುಷದ ತಪವೆ ಮೆಯ್‌ವೆತ್ತು
ನಿನ್ನಾಣ್ಮನನು ಕರೆಯಹೊರಟಂತೆ ಹೊರಟಿಹನು.
ವಿಧಿಯರಿತು ನಡೆವ ಹವನದಲಿ ಉದ್ಗಾತೃಗಳು
ಸ್ವರಹಿಡಿದು ಸೊಗಸಾಗಿ ನುಡಿವ ಶಕ್ತಿಯ ಮಂತ್ರ

ದೇವರನು ತರುವಂತೆ ನಮ್ಮ ಈ ಬಾಲಕನು
ನಮ್ಮ ಸಿದ್ಧಾರ್ಥನನು ಬಿಡದೆ ತಂದೇತಹನು.
ಬಾ ನನ್ನ ಅಣ್ಣಯ್ಯ, ತಾಯಿಗಭಿವಂದಿಸು.
ಬಹು ಹಿರಿಯ ಜೀವವಯ್ಯಾ ನಿನ್ನ ತಾಯಿಯದು ;
ಬಹು ಹಿರಿಯ ತಪ ಪುಣ್ಯ. ಬೀಳ್ಕೊಳುವ ಮೊದಲಲ್ಲಿ
ಹರಕೆಯನು ಕೊಳು. ಇಲ್ಲಿ ಬಾ ಒಮ್ಮೆ ವಂದಿಸು.
ತಾಯ್ತಂದೆಗಳ ಪುಣ್ಯ ನಿನ್ನಲ್ಲಿ ಫಲಿಸಲಿ.
ಸಿದ್ಧಾರ್ಥನನು ಕರೆದುತಹ ಕಾರ್ಯದಲಿ ನೀನು
ಸಿದ್ಧಾರ್ಥನಪ್ಪಂತೆ ದೇವರ್ಕಳೆಸಗಲಿ.

(ರಾಹುಲನು ಇವರಿಗೆ ನಮಿಸುವನು. ತೆರೆ ಬೀಳುವುದು.)

---

## ಸ್ಥಾನ ೨

**ಶ್ರಾವಸ್ತಿಯ ಮುಂದೆ ಜೇತವನದ ಆಶ್ರಮದ ಸ್ವಲ್ಪ ದೂರದಲ್ಲಿ ರಾಹುಲ, ಅಂಬಿಕೆ, ಬುದ್ಧನ ಶಿಷ್ಯ ಮಾನಂದ, ಒಬ್ಬ ಸೇವಕ.**

ಮಾನಂದ— ಅದುವೆ ಶ್ರಾವಸ್ತಿ. ಅಕೊ ಅಲ್ಲಿ ನಗರದ ಎಡಕೆ
ವಿಸ್ತಾರವಾಗಿ ಚಿತ್ರದೆಗೆಯ್ದ ಗಳಿಯಂತೆ
ಕಂಗೊಳಿಪ ಆ ಹಸುರ ಸರಸಿಯೇ ಜೇತವನ.
ಅಲ್ಲಿಯೇ ನಮ್ಮ ಗುರು ಮೂರು ಲೋಕಗಳ ಗುರು
ಬುದ್ಧಗುರುವೆಂಬ ಹೆಸರಿಂದ ದಿವಿಜರ ತಿಳಿವ
ಭೂಮಿಯಲಿ ಮಾನವರ ತಿಳಿವಾಗಿ ಮಾಡಿಹನು ;
ಸ್ವರ್ಗದಲಿ ಹರಿದಿಂದ್ರನಂದನವ ಸಲೆ ಬೆಳೆಸಿ
ದೇವರನು ಹೊರೆಯುತಿದ್ದಾ ವ್ಯೋಮಗಂಗೆಯನು
ನೆಲಕೆ ಪೂರ್ವದಿ ಭಗೀರಥನು ಸೆಳೆತಂದಂತೆ,
ಮನುಜರಿಗೆ ದುಸ್ಸಾಧ್ಯವೆನಿಪ ತಿಳಿವಿನ ಹೊಸಲ
ಅಮೃತರಸವನು ಜನದ ಮುಂದೆ ಹರಿಯಿಸುತಿಹನು.
ಗಂಗೆಯಿರ್ತಡಿಯಲ್ಲಿ ಬೆಳೆವ ಶಾಲಿಯ ಬಯಲು
ಇವನ ವಾಣಿಯಲಿ ಬೆಳೆದಿಹ ಮನದ ಬಯಲಂತೆ
ಹಸುರಲ್ಲ; ದಗೆಗೊಂತು ಗಂಗೆಯಲಿ ಮಿಂದವರು
ಇವನ ನುಡಿಯಿಂದ ಸಂಸಾರಿಗಳು ಸುಖಿಪಂತೆ
ಸುಖಿಸಲಾರರು ; ಇಲ್ಲಿ ಮನದ ಮಲ ಹರಿವಂತೆ
ಅಲ್ಲಿ ಮೆಯ್ ಶುದ್ಧಿಯಾಗದು.

ಅಂಬಿಕೆ— ಈಗ ಬುದ್ಧಗುರು
ಅಲ್ಲಿಹರೆ?

ಮಾನಂದ— ಒಂದು ಸಪ್ತಾಹ ಅಲ್ಲಿದ್ದಿಹರು.
ಇನ್ನೊಂದು ಸಪ್ತಾಹ ಅಲ್ಲಿಯೇ ಇರಬಹುದು.

ಅಂಬಿಕೆ— ಅವರ ಉಪದೇಶ ಕೇಳುವ ಜನಕೆ ಬಹು ಹಿತವೆ?

ಮಾನಂದ— ಅಮೃತರಸದಂತೆ ಹಿತ.

ಅಂಬಿಕೆ — ಬಹು ಜನರು ಇಂತೆಯೇ
ಅದನು ಹೊಗಳುವರು.
ಮಾನಂದ — ಜನ ಹೊಗಳಿ ಹೇಳುವ ಮಾತು
ಮನದ ಮೆಚ್ಚಿಕೆಯು ಅರ್ಥವ ತಿಳಿಸಲಾರದು ;
ಗುರುವಿನುಪದೇಶವಾಣಿಯನಂತಗುಣದಲ್ಲಿ
ಒಂದಂಶವನು ತೋರಲಾರದು. ಲೋಕಗಳ
ಎಲ್ಲ ತಿಳಿವುಗಳು ಒಂದೇ ಜೀವರತ್ನದಲಿ
ಒಂದುಗೂಡಿದ ತೆರದೆ ತೋರ್ಪುದಾತನ ಜೀವ.
ಅಂಬಿಕೆ — ಈಗ ಹೋದೊಡೆ ದೊರೆವುದೇ ಅವರ ದರ್ಶನ?
ಮಾನಂದ — ದೊರೆಯುವುದು. ಈ ಮೊದಲೆ ವಿಶ್ರಾಂತಿಯಿಂದೆದ್ದು
ಗುರುದೇವರೈತಂದು ವನದ ಮಧ್ಯದೊಳಿರುವ
ವಟವೃಕ್ಷದಡಿ ನೆರೆದ ಜನವನಾಶೀರ್ವದಿಸಿ
ವೇದಿಕೆಯ ಮೇಲೆ ಬಿಜಯಂಗೆಯ್ದು ಹೇಳುವರ
ನೋವನೆಲ್ಲವ ಕೇಳಿ ಸಂತೈಸಿ, ಕೇಳುವರ
ಸಂದೇಹಗಳ ಹರಿಸಿ ಶಾಂತಿಯನು ಕೊಡುತಿಹರು.
ಅಂಬಿಕೆ — ಪುಣ್ಯವಂತರು ಜನರು. ನೀವು ಆ ಗುರುವರರ
ಮುಖ್ಯ ಶಿಷ್ಯರೊಳೊಬ್ಬರಿರಬೇಕು.
ಮಾನಂದ — ಶಿಷ್ಯರಲಿ
ನಾನೊಬ್ಬನೆನಬಹುದು. ಮುಖ್ಯರಲಿ ನಾನಲ್ಲ.
ನಮ್ಮ ಗುರುದೇವರೆಡೆ ನಿಲುವ ಶಿಷ್ಯರ ಮಧ್ಯೆ
ನನಗೆ ಕಿರಿಯುವರಿಲ್ಲ.
ಅಂಬಿಕೆ — ಅವರ ಶಿಷ್ಯರು ಈಗ
ಬಹುಕಡೆಯೊಳಿಹರಲ್ತೆ ?
ಮಾನಂದ — ವಾರಣಾಶಿಯೊಳವರು
ಧರ್ಮಚಕ್ರವ ಹರಿಯಬಿಟ್ಟ ಮೊದಲಿಂದೀಗ
ಐದು ವರುಷದಲಿ, ಮಗಧರ ರಾಜಗೃಹದಿಂದ,

ಪಾಟಲೀಗ್ರಾಮ ರಾಮಗ್ರಾಮ ಗಾಂಧಾರ,
ಬೆಲುವ ವೈಶಾಲಿ ಭೋಗಗ್ರಾಮ ಕುಶಿನಾರ,
ಶ್ರಾವಸ್ತಿ ಸಾಕೇತ ಕೋಶಾಂಬಿ ಚಂಪಕ,
ಪಿಪ್ಪಲೀವನ ಗಯಾಶೀರ್ಷ ಕೋಟಿಗ್ರಾಮ,
ಉರುವೆಲಾ ಕೋಸಲ ಅನುಪ್ರಿಯ ಚಾಲಕ,
ಆರ್ಯಋಷಿ ದೇಶದೀ ಕೊನೆಯಿಂದ ಆ ಕೊನೆಗೆ
ಇವರ ವಾಣಿಯನು ಕೇಳದ ನಾಡು ಒಂದಿಲ್ಲ.

**ಅಂಬಿಕೆ** — ಆ ಪುಣ್ಯವಿಲ್ಲದುದು ನಮ್ಮ ನಾಡಿಗೆ ಮಾತ್ರ.

**ಮಾನಂದ** — ಯಾವುದಾ ನಾಡು?

**ಅಂಬಿಕೆ** — ಉತ್ತರಕೋಸಲದ ನಾಡು.

**ಮಾನಂದ** — ನೀವು ಬಹುದಲ್ಲಿಂದಲೆ?

**ರಾಹುಲ** — (ಅಂಬಿಕೆಗೆ ಮಾತ್ರ) ನೋಡು, ಅಂಬಿಕೆ,
ನಾವು ಯಾರೆಂಬುದನು ನಾನೆ ಹೇಳುವೆ, ನೀನು
ಯಾರಿಗೂ ಹೇಳಬೇಡೆಂದು ಬೇಡಿದೆನಲ್ಲ.

**ಅಂಬಿಕೆ** — ಹೇಳುವೆನೆ ಅಣ್ಣಯ್ಯ? (ಮಾನಂದನಿಗೆ) ನಾವು ಕೋಸಲದವರು.
ಗುರುದೇವರೆಮ್ಮ ನಾಡಿಗೆ ಬಂದ ನೆನವಿಲ್ಲ.
ಅದರಿಂದ ಅಂತೆಂದೆ. ಈಗ ನಾವಾವಸಕೆ
ಹೋಗಲೆಳಸುವೆವು.

**ಮಾನಂದ** — ನಾನಲ್ಲಿಗೇ ಹೊರಟಿಹೆನು.
ನೀವು ಜೊತೆಯಲೆ ಬರುವುದಾಗೆ ಸಂತಸದಿಂದ
ಒಡನೆ ಕರೆದೊಯ್ಯುವೆನು.

**ಅಂಬಿಕೆ** — ಇದಕಾಗಿ ವಂದನೆ
ಏನೆಂಬಿರಣ್ಣಯ್ಯ?

**ರಾಹುಲ** — ಹೋಗೋಣ ಅಂಬಿಕೆ.
ನಾನು ಬೇಡಿದುದು ನೆನವಿರಲಿ. ಏನು?

(**ಎಲ್ಲರೂ ಹೋಗುವರು.**)

---

## ಸ್ಥಾನ ೩

ಜೇತವನದಲ್ಲಿ ಬುದ್ಧನು ಕುಳಿತು ಉಪದೇಶಮಾಡುತ್ತಿದಾನೆ. ಹತ್ತಿರ ಆನಂದ, ಸಾರಿಪುತ್ರ. ಮುಂದುಗಡೆ ಊರಜನ ಕುಳಿತಿದಾರೆ.

ಬುದ್ಧ — ಒಳಗೆ ಬೆಳಗುವ ಬೆಳಕ ಸರಿಪಡಿಸಿಕೊಳಬೇಕು.
ಒಡವನಿಗೆ ಮನೆಯೊಳೇ ನಿಧಿಯೊಂದ ಹುಗಿದಿಟ್ಟು
ಎಲ್ಲಿರುವುದೆಂದು ಹೇಳಿದ ರೀತಿ, ಮನುಜನಿಗೆ
ಅವನೊಳಗೆ ನಿಲಿಸಿರುವ ಬುದ್ಧಿ. ಆದರಿಂದವನು
ಒಳಗಿರುವ ಅರಿವ ಶಕ್ತಿಯು ಅಳವನಾರೈಸಿ
ಹಿರಿದಾಗುವಂತೆಸಗಬೇಕು. ತಿಳಿವಿನ ಚೆಲುವು
ಅನುದಿನದ ಸುಖದುಃಖದಿಂದ ಬಗ್ಗಡವಾಗಿ
ಕೆಡುತಿರಲು ಸಾವಧಾನದಿ ಮನವ ನಿಲ್ಲಿಸುತ
ಕದಡು ತಳಕಿಳಿವಂತೆ ಭಾವ ತಿಳಿಯುಪ್ಪಂತೆ
ಶಾಂತ ಚಿತ್ತವನು ಸಾಧಿಸಬೇಕು. ಇದುವೆ ತಪ,
ಇದೆ ಧರ್ಮ, ಇದೆ ಯಾತ್ರೆ, ಇದೆ ಮುಕ್ತಿ, ಕಲ್ಯಾಣ.
ಈ ಸ್ಥಿತಿಯ ಸಾಧಿಸಲು ಎಲ್ಲರೂ ತೊಡಗುವುದು.

(ಮಾನಂದ, ಅಂಬಿಕೆ, ರಾಹುಲ, ಸೇವಕ ಬರುವರು)

ಮಾನಂದ — ಉಪದೇಶ ನಡೆಯುತಿದೆ. ಒಂದುಕಡೆ ಕುಳ್ಳಿರಿ.
ಇದು ಆದಮೇಲೆ ಪ್ರಸಾದವನು ಕೊಡುವರು ;
ಆಗ ಆಶಿಷವ ಬೇಡುವಿರಂತೆ.

(ಎಲ್ಲರೂ ಕುಳಿತುಕೊಳ್ಳುವರು)

ಬುದ್ಧ — ಎಲ್ಲರೂ.
ಎಲ್ಲರೂ ಈ ಸ್ಥಿತಿಯ ಪಡೆಯೆ ಯತ್ನಿಸಬೇಕು.
ಅರಿಯದವ ನಾನು, ಅಲ್ಪನು, ಕಿರಿಯವನು, ನನಗೆ
ಇದು ಸಾಧ್ಯವೇ ಎಂದು ಸಂದೇಹಪಡಬೇಡ.
ಒಳ್ಳಿದನು ಮಾಡುವೆನು ಎಂದು ಯತ್ನಿಪವನಿಗೆ

ಪಿಶ್ವವೇ ನೆರವಾಗಿ ನಿಲ್ಲುವುದು. ಸೃಷ್ಟಿಯಲಿ
ಶುಭವ ಸಾಧಿಸುತಿರುವ ಪರಶಕ್ತಿ ಯಾವುದೋ
ಅದು ಅಂಧ ಮಾನವನ ಹೃದಯದಲಿ ಮನೆಮಾಡಿ
ಅವನು ನೆನೆಯದ ಮಹಾಕಾರ್ಯಗಳನವನಿಂದ
ನಡೆಯಿಸುವುದು; ಅವನನುದ್ಧಾರಮಾಡುವುದು;
ಲೋಕ ಕಲ್ಯಾಣವನು ಅವನಿಂದ ತರಿಸುವುದು.
ನಿಂತಿರುವ ನೆಲೆಯಿಂದ ತಪದ ಶಾಂತಿಯ ನೆಲೆಯ
ದೂರವನು ನೋಡಿ ಭಯಪಡಬೇಡ: ಬಾಲಕನು
ಅಕ್ಷರವ ಕಲಿಯತೊಡಗಿದ ವೇಳೆ ವೇದಾಂತ
ಎನಿತು ದೂರವೊ ಎಂದು ಭಾವಿಸಲು ಫಲವೇನು?
ತಪದ ಫಲ ಕಣ್ಣಿಗೇ ಕಾಣದಿದೆ, ಬರಿ ಮಾತು
ಎಂದು ವಿಚಿಕಿತ್ಸೆಯಲಿ ಮನವ ಕುಂಠಿಸಬೇಡ:
ತೀರದಲಿ ನಿಂತು ಸಾಗರವ ನೋಡುವ ಕಣ್ಗೆ
ಒಂದೆ ಹರಿದಾರಿ ಸೀರಿನ ಹರಹು ಕಾಣುವುದು.
ನಾವೆಯಲಿ ಕುಳಿತು ಮುಂಬರಿದು ಹೋದಂತೆಲ್ಲ
ಹರಿದಾರಿ ಹರಿದಾರಿ ಎದುರುಗೊಳ್ಳುತ ಬಹುದು.
ಸಾಧಕನು ಹಿಂದಣಜ್ಞಾನವನು ಮನಗಂಡು
ಇನ್ನು ಸಾಧನೆಯಿಲ್ಲವೆಂದು ನೆನೆವುದು ಬೇಡ:
ಹಿಮಗಿರಿಯನೇರುವನು ಹಿಂದಿರುಗಿ ನೋಟವನು
ಬಯಲಮೇಲಟ್ಟಿಯ್ಸಿ ಆಹಾ ಎನಿತು ಏರಿದೆನು
ಇನ್ನು ಏರುವ ಕೆಲಸವಿಲ್ಲ ಎನೆ ಫಲವೇನು?
ಅವನ ಗೆಯ್ಮೆಕೆ ಕಾದ ಕೆಲಸ ಹಿಮಗಿರಿಯಾಗಿ
ಅವನ ಹಿಂಗಡೆಯಲೇ ಒಟ್ಟೈಸಿ ನಿಂತಿಹುದು.
ಸಾಧಿಸಿದೆನಾನೆಂಬ ಅಭಿಮಾನವೂ ಬೇಡ;
ಬೇಡನಾನಲ್ಪನೆಂಬಭಿಮಾನ ವಿಪರೀತ;
ಬೇಡ ಸಾಧನೆಯ ಪಥವಿಹುದರಲಿ ವಿಚಿಕಿತ್ಸೆ;

ಅವನವನು ತನ್ನ ಸದ್ಯಃಸ್ಥಿತಿಯ ನೆಲೆಯಿಂದ
ತನ್ನ ತಾನೇ ತಿದ್ದಿಕೊಳಲು ಯತ್ನಿಸಬೇಕು.
ಅಲ್ಪನಾನೆಂಬವನು ತಾನೆ ಹಿರಿದಾಗುವನು ;
ತನ್ನ ಪಥವನು ತಾನೆ ಕಾಣುವನು ; ಕಂಡುದನು
ಸಾಧಿಸುತ ಮುಂದೆ ನಡೆವನು ; ಮುಂದೆ ನಡೆನಡೆದು
ತಾ ಮುಕ್ತನಾಗುವನು ; ಅಂತೆಯೇ ಆ ತಾನು
ಲೋಕಗಳ ಕಲ್ಯಾಣದಾವಾಸವಾಗುವನು.

(ಅಂಬಾಪಾಲಿ ಸೇವಕರೊಡನೆ ಹಣ್ಣುಹೂಪಲು ಇಟ್ಟಿರುವ ತಟ್ಟೆಗಳನ್ನು ತೆಗೆಯಿಸಿಕೊಂಡು ಬರುವಳು.)

ಅಂಬಾ — ಜಯ ಬುದ್ಧ ಗುರುದೇವ ಜಯ ಶುದ್ಧ ಚಾರಿತ್ರ
ಜಯ ತ್ರಿಲೋಕಾಚಾರ್ಯ ಜಯ ಜಗನ್ಮಿತ್ರ
ಜಯ ಪತಿತಪಾವನಾ ಜಯ ಹೆ ದೀನಾವನಾ
ಜಯ ದೇಶಿಕೇಂದ್ರ ಜಯ ಉದ್ಧಾರಕರ್ತ
ಜಯ ತ್ರೈಭುವನ ಪೂಜ್ಯ ಜಯ ಧವಳ ಕೀರ್ತಿ
ಜಯ ಹೆ ಮಮ ಗುರುನಾಥ ಕಾರುಣ್ಯಮೂರ್ತಿ

(ಎಂದು ನಮಸ್ಕರಿಸುವಳು. ಫಲಪುಷ್ಪಗಳನ್ನು ಸಮರ್ಪಿಸುವಳು.)

ಬುದ್ಧ — ಬಾರ ಅಂಬಾಪಾಲಿ; ಬಾರ ತಾಯಿ ;
ಕುಳ್ಳಿರು.
ನಾನು ಅಲ್ಪನು ಎಂದ ಮಾನವನು
ಲೋಕಗಳ ಕಲ್ಯಾಣದಾವಾಸವಾಗುವನು.
ಆಗ ಅಲ್ಪನು ಎಂದು ಹಳಿವುದಕೆ ಕೂಡ
ತಾನು ತನ್ನವನಲ್ಲವೆಂದವನು ಅರಿಯುವನು.
ತಾನೆಂಬದುಂಟು : ವಿಶ್ವದ ಒಡವೆಯಾಗಿ ;
ತನ್ನೊಡವೆಯಾಗಿ ಇಲ್ಲ. ತಾನು ಎನ್ನುವುದು
ವಿಶ್ವಜೀವದ ವಟವೃಕ್ಷದಾನಂತ್ಯದಲಿ
ಏನೊಂದು ಕಣವಾಗಿ, ಬೇರಿನಲಿ ತಾಳಿಸಲಿ

ಶಾಖೆ ಉಪಶಾಖೆಯಲಿ ಕಾಂಡದಲಿ ಎಲೆಗಳಲಿ,
ಎಲ್ಲಿಯೋ ಅಲ್ಲಿ ಬೆರೆತಿರುವುದು ; ತಾ ತನ್ನ
ಅರಿತಿರುವುದು ; ಅಂತೆ ಮರೆತಿರುವುದು. ನಾನು
ನಾನು ನಾನು ನಾನು ನನ್ನದಿದು ನನ್ನದದು
ಎಂಬ ಅತಿಮಮತೆಯುರುಮರುಳುತನದಲಿ ಜೀವ
ಈ ಮರದ ಶಾಖೆಯಲಿ ಕಾಣ್ಬ ಕರುಟಂತಹುದು ;
ತನ್ನೆಡೆಗೆ ಬಂದ ರಸವನು ಲೋಭದಲಿ ಹೀರಿ
ತನ್ನ ಸುತ್ತಲೆ ರಕ್ಷೆಯೊಂದು ರೇಖೆಯ ಹಾಕಿ
ತಾಯಿ ತರುವಿನ ಬಾಳಿನಿಂದ ಬೇರೆಯುದಾಗಿ
ಕೆಟ್ಟುಹೋಗುವುದು. ತನ್ನೆಡೆಗೆ ಹರಿದೈತಂದ
ಜೀವರಸದಲಿ ಸುಖಿಸಿ ಮುಂದೆ ಅದ ಹರಿಯಬಿಡೆ
ತಾನೂ ಸುಖವನುಂಡು ತಾಯಿ ತರುವಿನ ಬಾಳು
ಹಸನಾಗಿ ಬೆಳೆವಂತೆ ಸಾಹಾಯ್ಯ ಮಾಡುವುದು.
ಲೋಕ ಕಲ್ಯಾಣವನು ಸಾಧಿಸುವ ಮಾನವನು
ತಾನೆಂಬುದೊಂದು ಬರಿಮಾಯೆ ಎಂದೆನಬೇಡ ;
ತಾನಲ್ಲದುಳಿದೆಲ್ಲ ಮಾಯೆ ಎಂದೆನಬೇಡ ;
ಸತತವೂ ಬೆಳೆಯುತಿಹ ಹಿರಿದೊಂದು ಬಾಳಿನಲಿ
ತಾನಿಂದು ಒಗೆದಿಹೆನು, ಮುಂದೆ ಏನಾಗುವೆನೊ
ಅದನು ಆ ಸತತವೂ ಬೆಳೆವ ಬಾಳರಿತಿಹುದು,
ಈ ಕ್ಷಣದೊಳಿಲ್ಲಿ ನನ್ನಿಂದ ಒಳಿತಾಗಲಿ,
ನನ್ನಿಂದ ನಾಲ್ಕು ಜೀವಕೆ ಸೌಖ್ಯ ದೊರೆಯಲಿ,
ನಾನೆಂಬುದಿಂತು ಸಾರ್ಥಕವಾಗಲಿ, ಎಂದು
ಸತತವೂ ಪರಹಿತವ ಸಾಧಿಸುತಲಿರುವುದು.
ಸ್ವಸ್ತಿರಸ್ತು, ಸ್ವಸ್ತಿರಸ್ತು, ಶುಭಮಸ್ತು.

**(ಎಂದು ಹೇಳಿ ಎರಡು ಕ್ಷಣ ಧ್ಯಾನದಲ್ಲಿ ಮಗ್ನನಾಗುವನು.**
**ಅವನು ಕಣ್ತೆರೆದ ಮೇಲೆ)**

ಅಂಬಾ — ಗುರುದೇವ ನಾಳೆಸಲಿ ನನ್ನ ಮನೆಗೈತಂದು
ನಿಮ್ಮಡಿಯ ಧೂಳಿಯಿಂದದನು ಪಾವನವಮಾಡಿ
ಸೇವಕಳ ಅಲ್ಪ ಆತಿಥ್ಯವನು ಸ್ವೀಕರಿಸಿ
ನನ್ನ ಮನ್ನಿಸಬೇಕು ಎಂದು ಬೇಡಲು ಬಂದೆ.
ದಯೆಗೆಯ್ದು ಇದ ಸಲಿಸಬೇಕು.

ಬುದ್ಧ — ಆಗಲಿ ತಾಯಿ.

ಅಂಬಾ — ನಾನು ಧನ್ಯಳು. ಇಲ್ಲಿ ನೆರೆದಿರುವರೆಲ್ಲರೂ
ನಾಳೆ ಗುರುದೇವರೊಡನೈತಂದು ನಮ್ಮಲ್ಲಿ
ಆತಿಥ್ಯ ಸ್ವೀಕರಿಸಬೇಕೆಂದು ಬೇಡುವೆನು.

ಎಲ್ಲರೂ — ಅಂತೆ ಆಗಲಿ ತಾಯಿ. ಬರುವೆವು. ಬರುವೆವು.

(ಶಿಷ್ಯನೊಬ್ಬನು ಅಷ್ಟು ಹೂವನ್ನು ತಂದು ಬುದ್ಧನ ಹತ್ತಿರ ಇಡುವನು.)

ಆನಂದ — ಎಲ್ಲರೂ ಬನ್ನಿರಿ ; ಪ್ರಸಾದವನು ಕೊಳ್ಳಿರಿ.

(ಒಬ್ಬೊಬ್ಬರೂ ಬಂದು ಪ್ರಸಾದವನ್ನು ತೆಗೆದುಕೊಳ್ಳುವರು.)

ಅಂಬಿಕೆ — (ಆನಂದನಿಗೆ) ನಮ್ಮ ಮಾತನು ಈಗ ಬಿನ್ನಯಿಸಲಾಗುವುದೆ?

ಆನಂದ — ಬನ್ನಿರಿ ಅರಿಕೆ ಮಾಡುವೆನು.

(ಬುದ್ಧನಿಗೆ ನಮಸ್ಕರಿಸಿ)

ಗುರುದೇವರಲಿ
ಬಿನ್ನಪ. ಉತ್ತರದ ಕೋಸಲದ ನಾಡಿಂದ
ಬಂದಿರುವ ಇವರು ಗುರು ಸಾನ್ನಿಧ್ಯದಲಿ ಏನೊ
ಮನವಿ ಮಾಡಲಪೇಕ್ಷಿಸುವರು.

ಬುದ್ಧ — ಬಹು ಸಂತೋಷ.
ಉತ್ತರದ ಕೋಸಲವು ನಮ್ಮ ಜನ್ಮದ ನಾಡು ;
ಶಾಕ್ಯರ ಪರಾಕ್ರಮದ ನೆಲೆಬೀಡು. ಅಲ್ಲಿಂದ
ಬಂದಿರೇ? ಕಪಿಲವಸ್ತುವನು ನೋಡಿರುವಿರೇ?
(ರಾಹುಲನು ಬಂದು ಅಣ್ಣಾ ಎಂದು ಅಪ್ಪಿಕೊಂಡು ಅಳುವನು.)
ಆಹ! ಏನಯ್ಯ ಇದು? ಕಂದ ಏನಾಯಿತು?

ಭಯಬೇಡ. ಏನಾಯ್ತು? ತಾಯ್ತಂದೆ ಇಲ್ಲವೇ ?
(ಅಂಬಿಕೆ ಬಂದು ನಮಸ್ಕರಿಸುವಳು.)
ಯಾರಿವರು ? ಅಂಬಿಕೆ ? ನೀನಿಲ್ಲಿ ಬಂದಿಹೆಯ ?
ಬಾಲಕನು ಯಾರು ? ಕುಮಾರನೆ ? ಸಂತೋಷ.
ಬಾರಣ್ಣ, ಕುಳ್ಳಿರು. ಅಂಬಿಕೆ, ಕುಳ್ಳಿರು.
ಎಲ್ಲರೂ ಕ್ಷೇಮವೆ ? ಸಂತೋಷ, ಸಂತೋಷ.
ಆನಂದ, ನೋಡು ನಿನ್ನಳಿಯನೈತಂದಿಹನು.

ಆನಂದ — ರಾಹುಲ, ಬಾರಣ್ಣ ; ಬಾ ನನ್ನನಪ್ಪಿಕೊ.
ನೀನಾಗಿ ಬಂದು ನನ್ನೆದೆಯಾಸೆಗಳನೆಲ್ಲ
ತುಂಬಿದೆಯ ?

ಅಂಬಾ — ಗುರುಗಳ ಕುಮಾರರೆ ? ನನ್ನಾಣೆ,
ಇದಕೇನು ಸಂದೇಹ ? ನಮ್ಮ ದೇವರ ರೂಪೆ
ಪ್ರತಿಯಾಗಿ ಕಾಣುತಿದೆ. ಗುರುವೆ ನಾನೀತನನು
ಮುಟ್ಟಬಹುದೆ ?

ಬುದ್ಧ — ಮುಟ್ಟಬೇಕು ಅಂಬಾಪಾಲಿ.
ಶುದ್ಧ ಮಾನಸರೆಲ್ಲ ಅವನ ಮೆಯ್ಮನಗಳನು
ಮುಟ್ಟಿ ಅವನನು ಶುದ್ಧ ಚೇತನನ ಮಾಡಿರಿ.

(ಎಲ್ಲರೂ ಬಂದು ರಾಹುಲನನ್ನು ಮುದ್ದಿಸುವರು. ಕೆಲವರು
ಅವನ ಕಾಲನ್ನು ಮುಟ್ಟಿ ನಮಸ್ಕರಿಸುವರು.)

ರಾಹುಲ — ನನಗೇನು ನಮಿಸುವಿರಿ ? ಬಾಲಕಗೆ ; ಹಿರಿಯರು ?
ಸಾಕುಬಿಡಿರಿ ; ಬಿಡಿರಿ. (ಎಂದು ಬಿಡಿಸಿಕೊಂಡು)
ಅಣ್ಣಾ ಗುರುದೇವರಲಿ
ನಾನೊಂದು ಮಾತ ಬೇಡಲು ಬಂದೆ.

ಆನಂದ — ಏನದು ?

ರಾಹುಲ — ತಾತ ಕಾದಿಹರು. ನಮ್ಮಮ್ಮಾಜಿ ಅಳುತಿಹರು.
ಅದರಿಂದ ನೀವು ಊರಿಗೆ ಬಂದು ತಾತ

ಅನುಜ್ಞೆ ಇವರ ಸಂತೈಸಬೇಕು. ಇದನು
ನಿಮಗೆ ಹೇಳುವ ಎಂದೆ ನಾವೀಗ ಬಂದಿಹುದು.

ಬುದ್ಧ— ಸರಿಯಾದ ಮಾತನಾಡಿದೆ ಮಗು; ದಿಟ ನುಡಿದೆ.
ನಿಮ್ಮ ಊರಿಗೆ ಇನಿತರೊಳೆ ಬರುವ ಎಂದೇ
ಯೋಚಿಸುತಲಿದ್ದೆವು. ಈಗ ನೀಕರೆಯುತಿಹೆ.
ಬರುವೆವಣ್ಣಾ.

ರಾಹುಲ— ಭಾಪುರೇ, ಅಂಬಿಕೆ, ಕೇಳು;
ಅಣ್ಣಾ ಊರಿಗೆ ಬರಲು ಒಪ್ಪಿದರು. ಅಣ್ಣಾ
ನಾಳೆ ಹೊರಡೋಣವೇ ಅಣ್ಣಾ.

ಬುದ್ಧ— ನಾಳೆ?
ನಾಳೆ ಅಂಬಾಪಾಲಿ ಔತಣಕೆ ಕರೆದಿಹರು;
ಬರುವೆವೆಂದಿಹೆವು ನಾವು.

ಅಂಬಾ— ಗುರುಗಳಡಿಯಲ್ಲಿ
ನಾನು ಬಿನ್ನಪ ಮಾಡಬಹುದೆನಲು ಹೇಳುವೆನು.

ಬುದ್ಧ— ಹೇಳು ತಾಯಿ.

ಅಂಬಾ— ತಮ್ಮನು ನೋಡುವಾಸೆಯಲಿ
ತಮ್ಮ ಪಿತೃದೇವರೂ ರಾಣಿಯವರೂ ಅಲ್ಲಿ
ಕಾದಿರುವ ವೇಳೆಯಲಿ ನನ್ನ ಔತಣಕಾಗಿ
ಗುರುಗಳಿಲ್ಲಿರಬೇಕು ಎಂದು ನಾನೆಳಸುವೆನೆ?
ನಾಳೆಯೇ ಕಪಿಲವಸ್ತುವಿನ ಕಡೆ ತೆರಳುವುದು
ಮನಕೆ ಬರುವೊಡೆ ಅದಕೆ ನನ್ನ ಒಪ್ಪಿಗೆಯುಂಟು.

ಬುದ್ಧ— ತಾಯಿ, ಅಂಬಾಪಾಲಿ, ನಿನ್ನ ಯೋಚನೆ ಒಳಿತು;
ಒಲ್ಲೆವು. ಆದರೆಮಗಿಂತ ಆತುರದ ನಡೆ
ಒಳಿತಲ್ಲ. ನಾಳೆ ಭಿಕ್ಷೆಯ ನೀನು ನೀಡುವೊಡೆ
ನಾವು ಕೊಳಬೇಕು. ಆಮೇಲೆ ಮುಂದಿನ ಪಯಣ.

ಅಂಬಾ ಗುರುದೇವರಿಚ್ಛೆಯೇ ನನ್ನಿಚ್ಛೆ. ನಾಳಿನಲಿ

ನಿನ್ನ ಆತಿಥ್ಯವನು ಸ್ವೀಕರಿಸೆ ಸಂತಸ.

ಬುದ್ಧ— ಸರಿ. ನಾವು ನಾಡಿದ್ದು ಜನ್ಮಭೂಮಿಯ ಕುರಿತು
ತೆರಳುವೆವು.

ಅಂಬಾ — ಗುರುದೇವ ನಾನು ನಿಮ್ಮೊಡನೆಯೇ
ಬರಲು ಅಪ್ಪಣೆಯಾಗಬೇಕು.

ಬುದ್ಧ— ಅದಕೇನಡ್ಡಿ ?

ಅಂಬಾ — ಗುರುದೇವರೆಳೆತನದಿ ಬೆಳೆದ ಅರಮನೆ ಊರು
ನೋಡಲೆನಗಾಸೆ.

ಬುದ್ಧ— ಬಹು ಸೊಗಸಾದ ಊರು ಅದು,
ಸೊಗಸಾದ ಅರಮನೆ; ಸೊಗಸಾದ ಉದ್ಯಾನ.
ಗೋಮತಿಯ ತಿಳಿನೀರ ಹೊಳೆ ಅಂಚಿನಂತೆಸೆವ
ವರ್ಣವರ್ಣದ ಚೆಲುವಿನಾರಾಮಗಳ ಮಧ್ಯೆ
ಮುಗಿಲ ಮುಟ್ಟುವ ತೆರದೆ ಬೆಳೆದಿರುವ ಸೌಧಗಳ
ವೃಂದವಾ ಕಪಿಲವಸ್ತು.

ಅಂಬಾ — ನೀವು ಬಾಲ್ಯದಲಿ
ಬಹು ಸುಖದ ಮಧ್ಯೆ ಬೆಳೆದಿರಬೇಕು.

ಬುದ್ಧ— ಆಹುದು.
ಬಹು ಸುಖದ ಮಧ್ಯೆ ಬೆಳೆದೆನು. ನಾನು ದಿನ ಕಳೆದು
ಜನಿಸಿದೊರ್ವನೆ ಪುತ್ರನೆಂದು ತಾಯ್ತಂದೆವಿರು
ವಾತ್ಸಲ್ಯ ವಿಭ್ರಾಂತಿಯಿಂದೆನ್ನ ಸಲಹಿದರು.
ಸತತವೂ ಕೊಡೆ ಹಿಡಿದು ನಿಲುವ ಸೇವಕರೆನಿತು;
ಆಟದಲಿ ಜೊತೆಯಾಗಿ ನೆರೆವ ಬಾಲಕರೆನಿತು;
ಪಾಟದಲಿ ನೇಹದಲಿ ಕಲಿಪ ಗುರುವರೆನಿತು;—
ನಮ್ಮ ಜಾಬಾಲಿಗಳನೀಗಳೂ ನೆನೆಯುವೆನು.
ಉಪವನದಿ ನಾವು ನಡೆಯುವ ದಾರಿಗಳ ಬದಿಗೆ
ಕೆಂದಾವರೆಯ ಸರಸಿಯಿಲ್ಲಿ, ಬಿಳಿದಾವರೆಯ

ಸರಸಿಯಿನ್ನೊಂದಲ್ಲಿ; ಇಲ್ಲಿ ಮಲ್ಲಿಗೆ, ಅಲ್ಲಿ
ಜಾಜಿ ಸೇವಂತಿಗೆ ಸಂಪಗೆ; ಒಂದುಕಡೆ
ಮರದ ಸಾಲಿನ ನಡುವೆ ಮೂಡಲನು ನೋಡುತಿರೆ
ನೇಸರುದಯಿಸಿ ಬರುವ ಉತ್ಸವದ ಚೆಲುನೋಟ;
ಇನ್ನೊಂದುಕಡೆ ಅಂತೆ ಮರದ ಸಾಲಿನ ನಡುವೆ
ಅವಸಸ್ತಮಾನದುಬ್ಬಟೆ; ಇರುಳು ನುಳಿದು ಬರೆ
ಚಂದ್ರನನು ಒಂದೊಂದು ಗಳಿಗೆ ತಲೆಯಲಿ ಧರಿಸಿ
ತಂಗಿಯರು ತೂಗಲೆಂದು ಕೊಡುವುವೋ ಎಂಬಂತೆ
ಸಾಲಿನಲಿ ನಿಂತಿರುವ ತರುರಾಜಿ. ಸೌಂದರ್ಯ
ಸೊಕ್ಕಿ ಹರಿಯಿತು ನನ್ನ ಸುತ್ತಲೂ ಎಳೆತನದಿ.
ಸಂಗೀತ ಸುಖದೂಟ ಸವಿಮಾತು ಸರಂಗಂಪು;
ದೇಹ ನೋವನು ಕಾಣದಂತೆ ಬಳಸಿದ ಪ್ರೇಮ;
ಜನರಿಂತೆ ಸತ್ಯವಂತರು ಪರಾಕ್ರಮಿಗಳು,
ಧೀರರು ಉದಾರಿಗಳು ಗುಣಪಕ್ಷಪಾತಿಗಳು.
ಚೆಲುವ ನಾಡಿನಲಿ ಬೆಳೆದೆನು ನಾನು ಬಾಲ್ಯದಲಿ;
ಚೆಲುವಿನಬ್ಧಿಯ ತೆರೆಯ ತೊಟ್ಟಿಲಲಿ ತೂಗಿದೆನು.

ಅಂಬಾ — ಆ ಚೆಲುವಿನಂಬುಧಿಯ ತೂಗುಮಂಚವ ಬಿಟ್ಟು
ನನ್ನಂಥ ದೀನ ಪತಿತರನು ರಕ್ಷಿಸಲೆಂದು
ಈ ಕಷ್ಟಜೀವನಕೆ ಮನವ ಬಾಗಿಸಿದಿರೇ
ಗುರುದೇವ ಕರುಣಾಳು!

ಬುದ್ಧ — ಈಗ ನಾನಿಹ ತಾಣ
ಆ ಚೆಲುವಿನಬ್ಧಿಯನು ಒಳಗೊಂಡ ಅರ್ಣವ.
ಅಲ್ಲಿ ಒಂದೆಡೆ ಹಿಡಿಮ ಸೇರಿಸಿದ ಚೆಲುವನೇ
ಇಲ್ಲಿ ಎಲ್ಲೆಡೆಯಲೂ ಹರಡಿಹುದ ಕಾಣುವೆನು.
ಅಲ್ಲಿ ಯಾವುದು ಕೃತಕವಾಗಿ ಕಣ್ಗೆಸೆದುದೋ
ಅದೆ ಸಹಜ ಭಾವದಲಿ ಕಣ್ಣ ಕೊಳುತಿಹುದಿಲ್ಲಿ.

ಅಲ್ಲಿದ್ದ ಸೌಭಾಗ್ಯವೆಲ್ಲ ಇಲ್ಲಿಯೂ ಇಹುದು.
ಅಲ್ಲಿ ಮಂಟಪ; ಇಲ್ಲಿ ನ್ಯಗ್ರೋಧದಾರಾಮ.
ಅಲ್ಲಿ ಸೌಧ; ಇಲ್ಲಿ ಈ ವಿಯತ್ಪ್ರಾಸಾದ.
ಅಲ್ಲಿ ಉಪವನ; ಇಲ್ಲಿ ಕಾನನ. ಯಾವುದೂ
ಅಲ್ಲಿಹುದು ಇಲ್ಲಿ ಇಲ್ಲದೆ ಇಲ್ಲ; ಇಲ್ಲಿಹುದು
ಹಲಕೆಲವು ಅಲ್ಲಿಲ್ಲ. ನೋಡಬಲ್ಲುದೆ ಮನಸು
ಸೃಷ್ಟಿಯಲಿ ಎಲ್ಲೆಡೆಯು ಜೀವಗಳ ಯಾವುದೋ
ಒಂದೆ ಸೌಂದರ್ಯ ಪರ್ಯಂಕ ತೂಗುತಲಿಹುದು.

(ಲಿಚ್ಛವಿಯ ಧರ್ಮಮಲ್ಲ ದಾನಮಲ್ಲರು ಪ್ರವೇಶಿಸುವರು.)

ಧರ್ಮ — ಗುರುದೇವ ವಂದಿಪೆವು.

ದಾನ — ವಂದನೆ.

ಬುದ್ಧ — ಶುಭಮಸ್ತು.
ಬನ್ನಿ; ಲಿಚ್ಛವಿಯಿಂದ ಎಂದು ಬಂದಿರಿ ?

ಧರ್ಮ — ಇಂದು.
ನಮ್ಮ ಪಿತೃದೇವರೈತಂದಿಹರು.

ಬುದ್ಧ — ಸಂತೋಷ.
ಸೌಖ್ಯವಾಗಿರುವರೇ, ನೀವೆಲ್ಲ ಸೌಖ್ಯವೇ ?

ಧರ್ಮ — ಗುರುಗಳಾಶೀರ್ವಾದದಿಂದ ಎಲ್ಲರು ಸೌಖ್ಯ.
ನಾಳೆ ಇಲ್ಲೊಂದು ಉತ್ಸವವನೇರ್ಪಡಿಸಿಹೆವು;
ಅದಕೆ ಗುರುದೇವರೈತಂದು ಆತಿಥ್ಯವನು
ಸ್ವೀಕರಿಸಬೇಕೆಂದು ಬೇಡುವೆವು.

ಬುದ್ಧ — ನಾಳೆ
ನಾವು ಅಂಬಾಪಾಲಿಯೌತಣಕೆ ಒಪ್ಪಿಹೆವು.
ಬೇರೆಲ್ಲಿಯೂ ಬರುವುದಾಗದು.

ಧರ್ಮ — ತಾವು
ಬಿಜಮಾಡಬೇಕೆಂದು ರಾಜರಿಗೆ ಬಹು ಆಸೆ.

ನಾವು ಕರೆತರುವೆವೆಂದೇ ಭರದಿ ಬಂದೆವು.
ಈಗ ಅಂಬಾಪಾಲಿಯ ಔತಣದ ಸಲುವಾಗಿ
ನಮ್ಮ ಕೈಬಿಡಬಾರದೆಂದು ಸಂಪ್ರಾರ್ಥಿಪೆವು.

ಆನಂದ — ಧರ್ಮವಲ್ಲರೆ ನಿಮಗೆ ತಿಳಿಯದಿಹ ಮಾತೆಯಿದು?
ಈಗ ನಿಮ್ಮೌತಣಕೆ ಬರಲಾಗಿ ನಿಮಗೆಂದು
ತಾಯಿ ಅಂಬಾಪಾಲಿಯನು ಬಿಟ್ಟತೆರಸಹುದು.
ನೀವಿದನಪೇಕ್ಷಿಸುವರಲ್ಲ.

ಧರ್ಮ — ಗುರುದೇವರು
ರಾಜರಿಗೆ ಯಾವ ಉತ್ತರ ಹೇಳಿಕಳುಹುವರು?

ಬುದ್ಧ — ನಾಳೆ ಅಂಬಾಪಾಲಿಯ ಔತಣಕೆ ರಾಜರೂ
ದಯಮಾಡಬೇಕೆಂದು ಹೇಳಿ.

ಅಂಬಾ — ನಾನೇ ಬಂದು
ಔತಣವ ಹೇಳುವೆನು. ನಾಗರಸ್ತ್ರೀ ಬಂದು
ರಾಜರನು ಕರೆವುದೇ ಎಂದು ಶಂಕಿಸಬೇಡಿ.
ರಾಜರೈಶ್ವರ್ಯದಂತೆನಗೆ ಐಶ್ವರ್ಯವಿದೆ;
ಗುರುದೇವರಿಂದ ಅದು ಪಾವನತೆಯೊಂದಿದೆ.

(ಮಲ್ಲರಾಜನು ಪ್ರವೇಶಿಸುವನು)

ಮಲ್ಲ — ಗುರುಗಳಿಗೆ ವಂದನೆ.

ಬುದ್ಧ — ಶುಭಮಸ್ತು. ದಯಮಾಡಿ.

ಮಲ್ಲ — ಬಾಲಕರು ಸರಿಯಾಗಿ ಅರಿಕೆಮಾಡುವರೋ
ಮಾಡರೋ ಎಂದು ನಾನೇ ಬಂದೆ.

(ಮಗನು ತಂದೆಗೆ ಎಲ್ಲವನ್ನೂ ಹೇಳುವನು.)

ಸಂತೋಷ.
ನಾಳೆ ಅಂಬಾಪಾಲಿಯ ಔತಣಕೆ ಬಹೆವಾವು;
ನಾಡಿದ್ದು ನಮ್ಮ ಗೃಹವನು ಉದ್ಧರಿಸಬೇಕು.

ಬುದ್ಧ — ನಾಡಿದ್ದು ನಾವು ಉತ್ತರದ ರಾಷ್ಟ್ರವ ಕುರಿತು

ಪಯಣ ಮಾಡುವೆವು. ನಾಳೆಯ ದಿವಸ ನೀವೆಲ್ಲ
ನಮ್ಮ ಶಿಷ್ಯಳ ಗೃಹಕೆ ದಯೆಗೆಯ್ವುದನು ಕೇಳಿ
ಆನಂದವಾಗಿಹುದು. ಕೃಪೆಯಿಂದ ಬರಬೇಕು.

**ಮಲ್ಲ —** ನಿಮ್ಮ ಸಾನ್ನಿಧ್ಯದಲಿ ದೊರೆವ ಅನ್ನವೆ ಅಮೃತ.
ಎಲ್ಲಿ ಅದು ದೊರೆವುದೋ ಅದುವೆ ದೇವಾಲಯ.
ನಿಮ್ಮ ಪಾದವ ಮುಟ್ಟಿ ಗುರುವೆಂದ ಜೀವನಿಗೆ
ನಾಗರಸ್ತ್ರೀ ಹೀನಳಲ್ಲ; ರಾಷ್ಟ್ರಾಧಿಪತಿ
ಮೇಲಲ್ಲ. ನಾನು ಹಿರಿಯನು ಎಂಬಹಂಕಾರ
ಆವನಾತ್ಮದಲಿ ಮೊಳೆಯಲಾರದು.

**ಬುದ್ಧ —** ತಮ್ಮಂತೆ
ಅರಿತವರು ನಮ್ಮ ಸಂಘದ ಶಿರೋರತ್ನಗಳು.
ತಮ್ಮ ನಡೆಯಿಂದುಳಿದ ಜನದ ನಡೆ ತಿದ್ದಲಿ.
ಇನ್ನು ಹೊರಡೋಣ.

**ಎಲ್ಲರೂ —** ವಂದನೆ, ವಂದನೆ.

(ನಮಸ್ಕರಿಸುವರು. ಬುದ್ಧನು ಆಶೀರ್ವದಿಸುವನು. ತೆರೆ ಬೀಳುವುದು.)

# ಸ್ಥಾನ ೪

ಕಪಿಲವಸ್ತುವಿನ ಮುಂದೆ ಒಂದು ತೋಪಿನ ಬಳಿ ದಾರಿಯಲ್ಲಿ.
ಇಬ್ಬರು ಬ್ರಾಹ್ಮಣ ತರುಣರು ಬರುವರು.

**ಕೌಂಡಿನ್ಯ —** ಈ ಮತಪನೇನೆಂದು ಕರೆಯುವುದು ?

**ಕೌಶಿಕ —** ಏನೆಂದು
ಕರೆಯಬೇಕೆಂದು ನಿನ್ನಭಿಲಾಷೆ ?

**ಕೌಂಡಿನ್ಯ —** ನನಗೆ ಇದು
ನ್ನಾಸ್ತಿಕ್ಯವೆಂದು ಕಾಣುವುದು. ಮನುಜನ ಕರಣ
ಕಾಂಬ ತತ್ತ್ವಗಳಿಹವು, ಉಳಿದುದೊಂದೂ ಇಲ್ಲ,
ಎಂಬ ಮತ ನಾಸ್ತಿಕ್ಯವೆನಲು ಸಂಶಯವೇನು ?

**ಕೌಶಿಕ —** ಇಷ್ಟಲ್ಲದಿನ್ನಾವುದಿದೆಯೆಂದು ನೀನೆಂಬೆ ?

**ಕೌಂಡಿನ್ಯ —** ನಾನೆಂಬೆ ! ನಾನೇನನೆಂಬೆ ? ನೀನೇನೆಂಬೆ ?
ನೀನು ಕೂಡ ನಾಸ್ತಿಕನ ತೆರದೆ ನುಡಿಯುತಿಹೆ ?

**ಕೌಶಿಕ —** ಆ ಮಾತನಾಮೇಲೆ ಚರ್ಚಿಸುವ. ಕರಣಗಳು
ಕಾಣದಿಹ ತತ್ತ್ವ ಇವೆ ಎಂಬೆ. ಅವು ಯಾವವು ?

**ಕೌಂಡಿನ್ಯ —** ದೇವರು ? ಪರಲೋಕ ?

**ಕೌಶಿಕ —** ಹೊಸ ಮತದ ಗುರುಗಳು
ದೇವರಿಲ್ಲ ಎಂದು ಹೇಳಿದರೆ ? ಇಹನೆಂದು
ಬಲ್ಲವರು ಹೇಳಿರಿ, ಉಳಿದವರಿಗಾ ಮಾತು
ಬೇಡ, ಎಂದರು. ನಿಮ್ಮ ಯೋಗ್ಯತೆಗೆ ನಿಲುಕದಿಹ
ತತ್ತ್ವಗಳ ಚರ್ಚೆಯಲಿ ಕಾಲವನು ಕಳೆಯದಿರಿ ;
ಸಾಧ್ಯವಾದುದನು ತಿಳಿಯಿರಿ ; ತಿಳಿದ ತತ್ತ್ವವನು
ಆಚರಿಸಿ ಎನ್ನುವರು. ಇದರಲ್ಲಿ ತಪ್ಪೇನು ?
ಪರಲೋಕವೆ ? ಒಳಿತು, ಪರಲೋಕವಿರಬಹುದು ;
ನೋಡಿದವರದನು ವರ್ಣಿಸಲಿ ; ಸಾಮಾನ್ಯರು

ಇರುವ ಈ ಲೋಕದಲಿ ಸರಿಯಾಗಿ ನಡೆಯಿರಿ ;
ಅಲ್ಲಿ ಏನೇನೊ ಇದೆ, ಏನನೋ ಮಾಡುವೆವು,
ಎಂಬ ಬಯಲ ಭ್ರಾಂತಿಯಲಿ ಇಲ್ಲಿ ಎದುರೊಳಿಹ
ವಸ್ತುಗಳ ಮರೆತು ಕರ್ತವ್ಯಗಳ ಕಡೆಗಣಿಸಿ
ಮರುಳಾಗಬೇಡಿರಿ, ಎನ್ನುವರು. ಇದು ತಪ್ಪೆ ?

ಕೌಂಡಿನ್ಯ— ಅದರಲೂ ಏನನೋ ಹೇಳಿದನೆ! ನಾನೆಂದು
ಭಾವಿಸುವ ನಾವು ನೀವೆಲ್ಲ ಭಾವದ ಧಾರೆ ;
ಕಾಲವೆಂಬುದು ಇರವ ಕಣವ ಪೋಣಿಸಿದೊಂದು
ಹಾರ ; ನೂರಾರು ಹನಿ ಒಂದರೊಡನೊಂದಿರಲು
ಎಲ್ಲವೂ ಎಳೆಯಾಗಿ ಕಾಂಬಂತೆ, ಮುತ್ತುಗಳು
ಸರದಿ ಕೋದಿರಲೊಂದು ಮೌಕ್ತಿಕದ ನಾಳವೂ,
ಕೊಳ್ಳಿ ಸುತ್ತುತಿರೆ ಬೆಂಕಿಯದೊಂದು ಚಕ್ರವೂ
ಕಾಂಬಂತೆ, ಬಿಡಿ ಬಿಡಿಯ ಅನುಭವದ ಕಣ ಹಲವು
ಒಂದನೊಂದನುಸರಿಸಿ ನಾನು ನೀನಾಗಿಹುದು ;
ನಾನೆಂಬುದೊಂದಿಲ್ಲ, ಕಾಲವೇ ನಿಜವಲ್ಲ,
ಎಂದು ಹೇಳಿದನಲ್ತೆ.

ಕೌಶಿಕ— ನಾಸ್ತಿಕ್ಯವೋ ಇದು ?

ಕೌಂಡಿನ್ಯ— ನನಗೆ ಇದು ನಾಸ್ತಿಕ್ಯ.

ಕೌಶಿಕ— ಕಂಡುದನು ಇದೆ ಎನಲು,
ಕಾಣದುದು ಇಲ್ಲವೆಂಬನು ಇವನು ನಾಸ್ತಿಕನು
ಎಂದು ಜರೆಯುವೆ. ಕಂಡುದನು ತೀರ ನೆಚ್ಚದಿರು,
ಆರಯಿಸೆ ಸತ್ಯ ತಿಳಿಯುವುದು ಎನೆ, ಕಂಡುದನು
ಇಲ್ಲೆಂದು ಹೇಳುವನು ಎಚ್ಚರಿಕೆ ಈ ಪ್ರಾಣಿ
ನಾಸ್ತಿಕನು ಎಂಬೆ. ಬ್ರಹ್ಮನೆ ಬಂದರೂ ನೀನು
ಮೆಚ್ಚುವಂತಿಲ್ಲ.

ಕೌಂಡಿನ್ಯ— ಈತನಿಗೆ ಜಾಬಾಲಿಗಳು

ಬಾಲ್ಯದಲಿ ಪಾಠ ಹೇಳಿದರಂತೆ ಅಹುದೇನು ?

**ಕೌಶಿಕ —** ಅಹುದೆಂದು ಕೇಳಿದೆನು. ಇವನ ಉಪದೇಶದಲಿ
ಅವರ ಮಾತಿನ ಛಾಯೆ ಕಾಣುವುದು.

**ಕೌಂಡಿನ್ಯ —** ಇನ್ನೇನು ?
ಅದರಿಂದಲೇ ಇವನ ವಾದ ನಾಸ್ತಿಕ ವಾದ
ಎಂದು ತಿಳಿಯದೆ ?

**ಕೌಶಿಕ —** ಅಣ್ಣ ನಿನ್ನಂಥ ಪಂಡಿತರು
ಬಾಲವನು ನೋಡಿ ಇಲಿ ಇಂತಿಹುದು ಎಂಬುದನು
ಗ್ರಹಿಸುವರು. ನಾನಂತ ಮಾರ್ಜಾಲನಲ್ಲ. ಬಾ
ಹೋಗೋಣ. ಹಿರಿಯರನು ತೆಗಳುವರೆ ಕೆಲಕಾಲ
ಕಳೆಯಲಿ.

**ಕೌಂಡಿನ್ಯ —** ಸರಿ ಹೋಗು ನಿನ್ನ ಮಾತಿಗೆ ಏನು ?

(ಎಂದು ಮುಂದೆ **ಹೋಗುವರು.**)

(**ಒಬ್ಬ ಮುದುಕಿ, ಒಬ್ಬ ಯುವತಿ, ಅವಳ ಸಣ್ಣ ಮಗು ಬರುವರು.**)

**ಮುದುಕಿ —** ಏನು ಮುಖವೇ ಅಮ್ಮ, ಏನು ಆ ಶಾಂತಿ !
ಎಷ್ಟು ಗಂಭೀರ ಆ ಭಾವ ! ಆಡಿದ ಮಾತು
ಹಾಲಿನಲಿ ಜೇನು ಸರಿಯನು ಬೆರಸಿದಂತೆ ಸವಿ !
ನಮ್ಮಪ್ಪ ಎಷ್ಟು ತಪವನು ಮಾಡಿ ಈ ತಿಳಿವ
ಸಾಧಿಸಿದನೋ ! ರಾಜಕುವರನಾಗಿದ್ದವನು
ಎಲ್ಲವನು ತೊರೆದು ಕಾಡಿನಲಿ ದೇಹವ ದುಡಿಸೆ
ಜ್ಞಾನ ಬಹುದೇನು ಆಶ್ಚರ್ಯ ?

**ಯುವತಿ —** ಆ ಕಣ್ಣಿನಲಿ
ಏನು ಕನಿಕರವಮ್ಮ ! ಎದುರಿನಲಿ ಕುಳಿತಿದ್ದ
ಒಂದು ಸಾವಿರ ಜನದಿ ಯಾರನೂ ಬಿಡದಂತೆ
ಒಂದು ನೋಟದಲಿ ಸೇರಿಸಿಕೊಂಡು, ನೀವೆಲ್ಲ
ನನ್ನವರು ನಾನು ನಿಮ್ಮವನು ಎನ್ನುವ ತೆರದೆ,

ಎಲ್ಲರನು ನೋಡಿದರು. ನನಗೆ ಇವರನು ನೋಡಿ
ಎಳೆಯತನದಲಿ ಕಂಡು ಮರೆತೊಬ್ಬ ಅಣ್ಣನೋ
ಎಂದು ತೋರಿತು. ಬಹಳ ಸತ್ಯವಂತರು ಇವರು.

ಮಗು — ಅಮ್ಮ ಅಲ್ಲಿಗೆ ಆವರು ಬಂದರಲ್ಲಾ ಆಗ
ನೀನು ನನ್ನನು ಭುಜದ ಮೇಲಿರಿಸಿಕೊಂಡಾಗ
ಅವರು ನನ್ನನು ನೋಡಿ ನಕ್ಕರಮ್ಮಾ!

ಯುವತಿ — ಆಹ!
ನಿಜವಾಗಿ?

ಮಗು — ನಿಜವಾಗಿ. ಅವರಲ್ಲಿ ಬಂದರೇ
ಆಗ ನಾವಿದ್ದಕಡೆ ನೋಡಿದರು. ನಾನು
ಎಲ್ಲರೊಂದಿಗೆ ನಮಸ್ಕಾರ ಎಂದೆ. ಅದಕೆ
ನಕ್ಕರು. ಬಹಳ ಒಳ್ಳೆಯವರಮ್ಮಾ ಅವರು.

(ಮುಂದೆ ಹೋಗುವರು. ಭಾರದ್ವಾಜ, ವಾಸಿಷ್ಠ, ಗೌತಮ ಬರುವರು.)

ಭಾರ — ನಮ್ಮೆದುರು ಹುಟ್ಟಿ ನಮ್ಮೆದುರು ಬೆಳೆದವರೆಲ್ಲ
ಹಗುರದಲಿ ನಮ್ಮ ಮರುಳೆಂಬ ದಿನ ಬಂದಿತು;
ಆದಿಯರಿಯದ ಸನಾತನ ಧರ್ಮವನು ಕೆದಕಿ
ತಪ್ಪುಗಳ ತೋರಿಸುವ ವಿಷಗಳಿಗೆ ಒದಗಿತು;
ಅವತಾರ ದೈವವೆನಿಸಿದ ರಾಮಚಂದ್ರನಿಗೆ
ಜನ್ಮವಿತ್ತವಳ ನಾಡಾದ ಈ ಕೋಸಲಕೆ
ಆರ್ಯಧರ್ಮವ ಹಳಿದು ಅವನು ಮಾನವನೆಂದು
ಕೇಳುಮಾತನು ಹೇಳಿ ನಗುವ ಗತಿ ಕವಿದಿತು;
ಬಾಲ ಬಾಲಿಶರು ಗುರುಪೀಠಗಳನೇರಿದರು;
ಧರ್ಮದೇವತೆ ತನ್ನ ಸಿಂಹಾಸನವನುಳಿದು
ಪಾತಾಳದೆಡೆಗೆ ತೆರಳಿದನು.

ಗೌತಮ — ಭಾರದ್ವಾಜ
ಏಕೆ ಕೆರಳುವೆ ಇಂತು? ಅಲ್ಲಿಯೂ ನೀನಿಂತೆ

ಕೋಪದಲಿ ನುಡಿದು ವಾದದ ನೆಲೆಯ ಮರೆಸಿದೆ.
ಸತ್ಯಸಂಸ್ಥಾಪನೆಗೆ ಕೋಪ ಒಂದಾಯುಧವೆ?
ತಡೆದುಕೊ; ಮೆಲುನುಡಿಯೊಳೆಲ್ಲವೂ ನಡೆಯುವುದು.

ಭಾರ — ತಡೆದುಕೊಳ್ಳುವುದು ಕೆಲಜನಕೆ ಬರುವುದು. ನನಗೆ
ನಮ್ಮ ಧರ್ಮವ ತೆಗಳುವರ ಸಿಗಿವೆನೆನಿಸುವುದು.

ವಾಸಿಷ್ಠ — ಧರ್ಮವನು ತೆಗಳಿದುದು ಏನು? ಸಿದ್ಧಾರ್ಥನಿಗೆ
ನಮ್ಮ ಜಾಬಾಲಿಗಳ ಉಪದೇಶ ಹಿರಿದಾಗಿ
ಅದನವನು ಮುಂದುವರಿಸಿಹನು. ಇಷ್ಟರಲೇನು?
ಕೆಲಕಾಲ ಕಳೆಯೆ ತಿಳಿಯುವನು.

ಭಾರ — ಆ ಕಾಲದಲಿ
ಈಗಲೇ ವ್ರಾತ್ಯವೆನಿಸಿರುವ ಕೋಸಲ ಭೂಮಿ
ಹೊಲೆಗಲಸಿ ಹಾಳಾಗಿ ಕೆಸರಿನಲಿ ಕೂಲುವುದು.
ಕಾಡುಜನರೇ ಇವರ ಶಿಷ್ಯರು. ವೇಶ್ಯೆಯರು
ಇವರಿಗೌತಣವ ನೀಡುವರು; ಅಂತ್ಯಜರೆಲ್ಲ
ಈತನಿಗೆ ಉತ್ತಮರು; ಉತ್ತಮರ ಸರಿಜೋಡು,
ಇಲ್ಲವೇ ಉತ್ತಮರಿಗಿಂತ ಒಕ್ಕೈ ಮೇಲು.
ಎಂತು ಸಹಿಸಲಿ ನಾನು ಈ ಧರ್ಮನಾಶವನು?
ಈ ಅಧರ್ಮೋದ್ಧಾರ ಕಾರ್ಯವನು? ವಾಸಿಷ್ಠ
ನೀನಿಂತು ಸುಮ್ಮನಿರೆ ಧರ್ಮ ಉಳಿಯುವುದೆಂತು?

ವಾಸಿಷ್ಠ — ನಿನ್ನ ಧರ್ಮೋತ್ಸಾಹ ನನ್ನೊಳುದ್ಭವಿಸದಿರೆ
ನಾನೆಂತು ಕಾದಲಿ? ನನಗೆ ತೋರುತಲಿದೆ,
ನೀನು ಧರ್ಮದಲಿ ಅಪಚಾರವನು ಬಗೆಯುತಿಹೆ.

ಭಾರ — ನಾನು? ಧರ್ಮದಲಿ ಅಪಚಾರಮಾಡುತಲಿಹೆನೆ?
ಅದು ಎಂತು?

ವಾಸಿಷ್ಠ — ನೋಡು ಧರ್ಮವನು ನಾನೂ ನೀನು
ಉಳಿಸುವೆವು ಎಂಬಲ್ಲಿ ಧರ್ಮ ಎಂಬುದು ಎನಿತು

ಕಿರಿದಾಯ್ತು ? ನಮ್ಮ ಸಿದ್ಧಾರ್ಥಸಂತ್ಯಜರಲ್ಲಿ
ಕನಿಕರವ ತೋರಿದೊಡೆ ಧರ್ಮವಳಿಯುವುದಾಗೆ
ಆ ಧರ್ಮವಾವ ಧರ್ಮ ? ಹೇಳುವುದ ಕೇಳು,
ಸಾವಧಾನದಿ ವಿಚಾರಿಸು, ಧರ್ಮವನು ಬೆಳಸು.
ಅವತಾರ ದೈವವೆಂದಾ ರಾಮಚಂದ್ರನನು
ಪತಿತಪಾವನನೆಂದು ನಾವೆ ಹೊಗಳುವೆವಲ್ತೆ ?
ಪತಿತರನು ಮುಟ್ಟಿ ಪಾವನಗೈವ ಆತ್ಮಬಲ
ನನಗಿಲ್ಲ ನಿನಗಿಲ್ಲವೆನ್ನು. ಬಲ ಇರುವವನು
ಅವರನುದ್ಧರಿಸುವೆನು ಎಂದು ಯತ್ನಿಸೆ ಅದನು
ಧರ್ಮಕೆ ವಿರೋಧವೆನಲೇಕೆ ?

**ಭಾರ** — ಗೌತಮ

ನೀನೇನನೆಂಬೆ ?

**ಗೌತಮ** — ಭಾರದ್ವಾಜ, ತಿಳಿದವರು
ಯಾವುದನು ಹೇಳಿದೊಡೆ ಅದನು ಕೇಳುವೆ ನಾನು.
ನಮ್ಮವರ ಧರ್ಮ ಇದು. ಧರ್ಮ ಧರ್ಮ ಎಂದು
ಯಾವುದನು ಕರೆಯುವೆವೊ ಅದು ಜಗವ ಧರಿಸಿಹುದು.
ಒಬ್ಬರಿಬ್ಬರ ಮಾತು ನಡೆಯಿಂದ ಆ ಧರ್ಮ
ಕೆಟ್ಟುಹೋಹುದೆ ? ಎಲ್ಲವನು ಧರಿಸಿ ಹಿಡಿದಿರುವ
ಧರ್ಮವಾವುದು ಎಂದು ತಿಳಿಯುವರೆ, ತಾಳ್ಮೆಯಲಿ
ಎಲ್ಲರಾಂತರ್ಯದಲಿ ಸುಳಿಪ ಧರ್ಮದ ಅಡಿಯ
ಸಪ್ಪುಳನು ಕೇಳಬೇಕು. ನಮ್ಮ ಹೃದಯದಲಿ
ಸುಳಿವುದೋ ಅದು ಎಂದು ಏಕಾಂತದಲಿ ಕೇಳಿ
ಅದನು ಇದರಲಿ ಇದನು ಅದರಲಿ ಸಮನ್ವಯಿಸಿ
ಧರ್ಮಪದಗತಿಯನನುಸರಿಸಿ ಊಹಿಸಬೇಕು.
ತತ್ತ್ವದ ವಿಚಾರದಾರಂಭದಲೆ ಕೋಪಗೊಳೆ
ಉದ್ವೇಗದಲ್ಲೋಲಕಲ್ಲೋಲದಲಿ ಮನಕೆ

ಧರ್ಮದೇವತೆಯ ಮೆಲುನಡೆಯ ಸುಳಿವರಿಯದು.
ಧರ್ಮ ಒಹುಮುಖದಿಂದ ಸುಡಿಯುವುದು, ಬಹುದೂರ
ಹರಿಯುವುದು, ಒಹುವೇಳೆ ಕಣ್ಣಿಂದ ಮರೆಯುವುದು.
ಗಾಳಿಯಡಿ ಗುರುತ ಮರಳಿನಮೇಲೆ ಕಾಂಬವೊಲು
ಸೂಕ್ಷ್ಮ ಧರ್ಮದ ಅರಿವು. ತಾಳ್ಮೆಯಿರಬೇಕು
ಧರ್ಮವನು ಪೊರೆವೆನೆಂಬರಿಗೆ; ನಮ್ಮನ್ನರಿಗೆ.

(ಎನ್ನುತ್ತ ಮುಂದೆ ಹೋಗುವರು. ಇಬ್ಬರು ಹುಡುಗರು ಬರುವರು.)

ಒಬ್ಬನು — ನನಗೆ ನೋಡೆಷ್ಟು ಸಕ್ಕರೆ.

ಇನ್ನೊಬ್ಬ — ನೋಡು ನನಗೆಷ್ಟು.

ಒಬ್ಬ — ನನಗೆ ಹೆಚ್ಚು.

ಇನ್ನೊಬ್ಬ — ನನಗೆ ಹೆಚ್ಚು.

ಒಬ್ಬ — ನನಗೇ ಹೆಚ್ಚು.

ಇನ್ನೊಬ್ಬ — ನನಗೆ ಹೆಚ್ಚೆನ್ನುತಿರೆ ಪ್ರತಿಯಾಗಿ ಹೇಳುವೆಯ?
ಬಾ ನಿನಗೆ ಕೊಡುತೇನೆ.

ಒಬ್ಬ — ಧೈರ್ಯವಿದ್ದರೆ ಕೊಡು.
ನೋಡೋಣ. ಕೊಟ್ಟಷ್ಟು ಹಿಂದಕ್ಕೆ ಕೊಳ್ಳುವೆ.

(ಇಬ್ಬರೂ ಜಗಳ ಮಾಡುವರು. ಜಾಬಾಲಿ ಧನಪಾಲ ಬರುವರು.)

ಜಾಬಾಲಿ — ಎಲ ಎಲಾ ಏನೊ ಇದು ಪುಂಡಾಟ!

(ಧನಪಾಲ ಅವರನ್ನು ಬಿಡಿಸುವನು.)

ಇನ್ನೊಬ್ಬ — ನೋಡಿವನು.

ಧನ — ಅವನೇನು? ನಿನ್ನನೂ ನೋಡಿದೆನು. ಏನು ಇದು?

ಇನ್ನೊಬ್ಬ — ನನ್ನ ಸಕ್ಕರೆ ಹೆಚ್ಚು ಎಂದೆ; ನನ್ನದು ಹೆಚ್ಚು
ಎಂದು ಅವನೆಂದ; ಯಾರದು ಹೆಚ್ಚು ನೋಡೋಣ
ಎಂದು ಗುದ್ದಾಡಿದೆವು.

ಜಾಬಾಲಿ — ಚೆನ್ನಾಯ್ತು; ಅಣ್ಣಾ,
ಇದಕಿಷ್ಟು ಗಲಭೆ ಮಾಡುವರೆ?

**ಒಬ್ಬ —** ಇದು ಗಲಭೆಯೋ?
ಅಲ್ಲಿ ದೊಡ್ಡವರು ನೀವೆಲ್ಲ ಮಾಡಿದ ಗಲಭೆ?
ಅದನು ಕೇಳುವರಿಲ್ಲ.

**ಧನ —** ಎಲ ಎಲಾ ಪೋರಾ,
ಎಷ್ಟು ಮಾತೊ?

**ಇನ್ನೊಬ್ಬ —** (ಇವರನ್ನು ಚೆನ್ನಾಗಿ ನೋಡಿ) ತಾತ ಜಾಬಾಲಿಗಳು ಕಣೋ.
ಅಯ್ಯೋ ತಪ್ಪಾಯ್ತು, ಮನ್ನಿಸಿ. ಬಾರೊ ಹೋಗೋಣ.

**(ಎಂದು ಹುಡುಗರು ಹೊರಟುಹೋಗುವರು. ಜಾಬಾಲಿ ಧನಪಾಲ ದಾರಿಯ ಪಕ್ಕದ ಒಂದು ಕಲ್ಲಮಂಚದಮೇಲೆ ಕುಳಿತುಕೊಳ್ಳುವರು.)**

**ಜಾಬಾಲಿ —** ಸುಟಿಯಾದ ಹುಡುಗರು.

**ಧನ —** ಪಟಿಂಗರು.

**ಜಾಬಾಲಿ —** ಬಾಲಕನು
ದಿಟವನೇ ಹೇಳಿದನು. ನಾವು ಹಿರಿಯರು ಅಲ್ಲಿ
ಚರ್ಚೆಮಾಡಿದುದಿಂತೆ ಆಯ್ತು. ನನ್ನದು ಧರ್ಮ
ಧರ್ಮ ನನ್ನದು ಎಂದು ಮನದೊಳದನವಿತಿಟ್ಟು
ಹಿರಿದು ಯಾವುದು ಎಂದು ಯುದ್ಧಮಾಡಿದೆವಲ್ತೆ
ಏನಿದೆಯೊ ತೋರಿಸುವುದಿಲ್ಲ; ಏನಿದೆಯೆಂದು
ನೋಡಿ ತಿಳಿಯುವುದಿಲ್ಲ; ಜಗಳದಲಿ ತೊಡಗುವೆವು.
ಮಾನವನ ಮಾತೆ ಇಂತಾಗಿಹುದು. ಧರ್ಮವನು
ಮುಂದಿಟ್ಟು ಅದರ ಹೆಸರಿನಲಿ ಹೊಡೆದಾಡುವೆವು.
ಧರ್ಮ ಹಿರಿದೆಂದು ತೋರುವೆನೆಂದು ಹೇಳುತ್ತ
ನಾನು ಹಿರಿಯನು ಎಂದು ತೋರಿಸುವ ಸಲುವಾಗಿ
ಮಾತಮಲ್ಲರು ಕಾಳಗದ ಕಣಕೆ ಇಳಿಯುವೆವು.
ದೈವಕೆ ನಿವೇದನ, ಊಟವೆಂಬುದು ನಮಗೆ,
ಎಂಬಂತೆ ಈ ಎಲ್ಲ ಜಗಳವೂ ನೆಪ ಮಾತ್ರ
ಧರ್ಮವನು ಕುರಿತಿಹುದು; ನಿಜವಾಗಿ ನೋಡುವರೆ

ನಮ್ಮ ಹೆಮ್ಮೆಯು ತೃಪ್ತಿಗೆಂದೆ ಮೈಯ್‌ಗೊಂಡಿಹುದು.
ಇದರಿಂದಲೇ ನಮ್ಮ ವೇದಗಳೊಳುದಯಿಸಿದ
ಜ್ಞಾನವಾಹಿನಿ ಸರಸ್ವತಿ ಸ್ವಲ್ಪ ಕಾಲದಲೆ
ಶಾಸ್ತ್ರಗಳ ಮರುಭೂಮಿಯಲಿ ಹೊಲಬು ತಿಳಿಯದೆ
ವಾದದಲಿ ಇಂಗಿ ಕಣ್ಣಿಂದ ಮರೆಯಾಯಿತು.

ಧನ — ಗುರುಗಳೇ ಇವರು ನಿಮ್ಮಿಂದ ಕಲಿತುದಕಿಂತ
ಮುಂದೆ ಏನನು ಕಲಿತರು? ಏನಹೇಳುವರು?

ಜಾಬಾಲಿ — ಕಲಿತುದು ಹೇಳುವುದು ಮುಂದಿಹುದೆ ಎನಬೇಡ.
ಮುಂದಿಹುದು ನಿಜ. ಆದರಿದು ಇವರ ಹಿರಿಮೆಯಲಿ
ಮುಖ್ಯಾಂಶವಲ್ಲ. ಈತನಲಿ ಹಿರಿದಾವುದೆನೆ
ಬಾಳುವೆಯ ದಾರಿ. ನನ್ನಲಿ ಕಲಿತನಪ್ಪುದು;
ಕಲಿತಲ್ಲಿ ಬಿಡಲಿಲ್ಲ; ಬಾಳೊಳದ ತಂದನು;
ಮನೆಮಂದಿಯನು ತೊರೆದು ದೇಶದಲಿ ನಡೆದನು.
ಗುರುದೇವ ಆಲಾರ ಕಾಲಾಮರನು ಸೇರಿ
ಉಪದೇಶವನು ಕೊಂಡು ಬಾಳಿನಲಿ ತಂದನು.
ರಾಮ ಗುರುವಿನ ಶಿಷ್ಯ ಉದ್ರಾಕರೆಡೆ ಸಾರಿ
ಅವರು ಹೇಳ್ದುದ ಕೇಳಿ ಬಾಳಿನಲಿ ನೋಡಿದನು.
ಆಮೇಲೆ ವರ್ಷಾಂತರವನು ವನದಲಿ ಕಳೆದು
ಧ್ಯಾನದಲಿ ನಿಂದನು, ಸತ್ಯವನು ಕಂಡನು;
ಕಂಡ ಸತ್ಯವ ಮರಳಿ ಬಾಳಿನಲಿ ತಂದನು.
ಜಗಕೆ ಒರೆದಿಹನು. ವೀಣೆಯ ತಂತಿ ಸುಸ್ವರವ
ನೀಡುವೊಡೆ ಅತಿಯಾಗಿ ಬಿಗಿಯಲಾಗದು ಅದನು,
ಅತಿಯಾಗಿ ಸಡಿಲಿಸಲು ಆಗದು, ಎಂಬನೇ
ಈ ಮಧ್ಯಮಾರ್ಗ ಇವನುಪದೇಶದಲಿ ಮುಖ್ಯ.
ಇದೆ ಇವನ ವಿಜಯಪಥ; ಇದೆ ಇವನ ಹಿರಿಮೆ.

ಬಾಲ್ಯವನು ನೆನೆದು ಗುರುವೆಂಬನೀತನು ಎನ್ನ ;
ಇವನೆನಗೆ ಗುರುವೆಂದು ನಾ ಮನದಿ ಬಲ್ಲೆನು.

ಧನ — ಇವರ ಉಪದೇಶದಲಿ ನಿಮ್ಮ ಉಪದೇಶಕೂ
ಮುಂದಾದುದಾವುದು ?

ಜಾಬಾಲಿ — ಅದರರಿವು ಬಹುತೊಡಕು.
ಮೊದಲು ದೇವರು ಎಂಬ ತತ್ತ್ವವನು ಕುರಿತು,
ಎರಡನೆಯದಾಗಿ ಪ್ರತ್ಯಕ್ಷ ಎಂಬುದರರ್ಥ
ಏನು ಎಂಬುದ ಕುರಿತು, ಮೂರನೆಯದಾಗಿ
ಲೋಕಗಳ ಕಲ್ಯಾಣ ಸೂತ್ರದಲಿ ಸೇರಿರುವ
ಸಾವು ನೋವಿನ ಕರಿಯ ಮಣಿಯನು ಸಮರ್ಥಿಸುವ
ರೀತಿಯನು ಕುರಿತು: ಈ ಮೂರು ವಿಷಯದಲಿ
ಈತನುಪದೇಶ ನಮ್ಮವರ ಉಪದೇಶವನು
ಮುಂದುವರಿಸಿಹುದು. ರಾಮಾಯಣದ ಕಾಲದಲಿ
ನಮ್ಮ ಹಿರಿಯರು ರಚಿಸಿದಾ ತತ್ತ್ವ ಸೌಧಕೆ
ಇಂತು ಮಂಗಲ ಹೇಮ ಕಲಶವನು ಹಚ್ಚಿಹುದು.

(ನಾಲ್ಕು ಜನ ಬರುವರು.)

ಜನ — ಜಯ ಬುದ್ಧಗುರುದೇವ ಜಯ ಶುದ್ಧಚಾರಿತ್ರ

(ಎಂದು ಹಾಡುತ್ತ ಹೋಗುವರು. ಇವರೂ ಅವರ ಜತೆಯಲ್ಲಿ ಮುಂದರಿಯುವರು.)

---

## ಸ್ಥಾನ ೫

ಯಶೋಧರೆಯ ಅಂತಃಪುರ. ಯಶೋಧರೆ ಅಂಬಿಕೆ.

**ಯಶೋ —** ಈಗ ನಗರಕೆ ಬರುವರೇ ಅವರು ಅಂಬಿಕೆ?

**ಅಂಬಿಕೆ —** ಹೌದು ಮಾಜೀ.

**ಯಶೋ —** ಎದುರುಗೊಳಲೆಂದು ಬಹಳ ಜನ
ಹೋಗಿಹರೆ?

**ಅಂಬಿಕೆ —** ಊರು ಊರೇ ಹೊರಟುಹೋಗಿಹುದು.

**ಯಶೋ —** ಊರು ಊರೇ ಅವರನೆದುರುಗೊಳಹೋಗುವುದು ;
ನಾನು ಹೋಗುವುದು ಸಲ್ಲದು. ನನ್ನ ಪುಣ್ಯವನು
ಏನೆಂದು ಹಳಿಯಲಿ? ಕಪಿಲವಸ್ತುವಿನಲ್ಲಿ
ಎಳೆತನದೊಳವರಿರ್ದ ಕಾಲದಲಿ ಅಷ್ಟಿಷ್ಟು
ತಿಳಿದವರು ತಿಳಿಯದಿದ್ದವರು ; ಅರಮನೆಯಲ್ಲಿ
ಇನಿತನಿತು ಸೇವೆಗೆಯ್ದವರು ಗೆಯ್ಯದವರು ;
ದೂರದಲಿ ನಿಂತು ಕೈಮುಗಿದವರು ; ದಾರಿಯಲಿ
ಹೋಗುತಿರೆ ನೆರೆಯುವರ ಕುರಿತು ಅಕೊ ನೋಡಲ್ಲಿ
ಅರಗುವರ ಸಿದ್ಧಾರ್ಥ ಹೋಗುತಿಹನೆಂದವರು ;
ಗುರುತಿಲ್ಲದಿದ್ದವರು, ಇದ್ದವರು, ಬರಿ ಅವರ
ಹೆಸರ ಕೇಳಿದ್ದವರು, ಕೇಳದೆಯೆ ಇದ್ದವರು ;
ಎಲ್ಲರೂ, ನಮ್ಮವನು ನಮ್ಮ ರಾಜಕುಮಾರ
ನಮ್ಮ ಗುರು ಎಂದು, ಸಂಭ್ರಮಿಸಿ ಸನ್ಮಾನ್ಯನನು
ನೋಡಬಹುದು. ದೇಹ, ಮನ, ಉಸಿರು ಎಲ್ಲವನು
ಅವನುಸಿರು ಮನ ದೇಹದಲಿ ಬೆರೆಸಿ ಒಂದಾಗಿ
ಬಾಳಿನೊಂದರ್ಧವಾಗಿದ್ದವಳು ನಾನಿಂದು
ನೋಡಬಾರದು.

**ಅಂಬಿಕೆ —** ಮಾಜಿ, ದೇವಿಯರು ಗುರುಗಳನು
ನೋಡಬಹುದೆಂದೆನ್ನ ಮನದರಿಕೆ.

**ಯಶೋ —** ಗುರುಗಳನು!
ಏನು ಇದು ಅಂಬಿಕೆ? ಆಣ್ಮನನು ನೀನೂ
ಗುರುವಾಗಿ ಮಾಡಿಕೊಂಡಿರುವೆಯಾ?

**ಅಂಬಿಕೆ —** ಅಮ್ಮಾಜಿ
ಅವರ ನೋಡುವವರೆಗೆ ಅರಗುವರ ಸಿದ್ಧಾರ್ಥ
ಶಾಕ್ಯರಾಜಕುಮಾರ ಪತಿ ಪುತ್ರ ದೊರೆ ತಂದೆ
ಎಂದು ಅವರವರು ಅವರವರ ಸಂಬಂಧವನು
ನೆನೆಯುವುದು ಸಾಧ್ಯವಾಗುವುದು ; ನೋಡಿದಮೇಲೆ
ಎಲ್ಲರೂ ಆತನನು ಗುರುವೆಂದೆ ಕರೆಯುವರು.

**ಯಶೋ —** ಎನ್ನರಸನೆನ್ನ ಬಿಟ್ಟಂದು ಲೋಕವನೆಲ್ಲ
ಬಿಟ್ಟರೆಂದೆಣಿಸಿದ್ದೆ ನಾನು. ಆರಯಿಸುವರೆ
ಎನ್ನಮಾತ್ರವೆ ಅವರು ಬಿಟ್ಟಂತೆ ತೋರುತಿದೆ.
ಉಳಿದೆಲ್ಲ ಮಂದಿಯೂ ಬಳಗವೂ ಲೋಕವೂ
ಈಗಳೂ ಆತನಿಗೆ ಪ್ರಿಯ ; ಆತನೆಲ್ಲರಿಗೆ
ಗುರುವಾಗಿ ಪೂಜ್ಯನಾಗಿಹರು. ನಾನೊಬ್ಬಳೇ
ತ್ಯಾಜ್ಯಳಾತನಿಗೆ, ವರ್ಜ್ಯಳು. ನಾನು ಒಬ್ಬಳು
ಅವರ ಎನ್ನವನೆಂದು ಕರೆಯಲಾಗದ ಪಾಪಿ.

**ಅಂಬಿಕೆ —** ಮಾಜಿ ಇಂತಹ ಮಾತನಾಡದಿರಿ. ನಿಜವಾಗಿ
ಗುರುದೇವರೊಂದನೂ ಬಿಡಲಿಲ್ಲ. ಜಗವನೇ
ಕಟ್ಟಿಕೊಂಡಿಹರು. ಜಗವೆಲ್ಲ ಪ್ರಿಯವಾತನಿಗೆ ;
ಎಲ್ಲ ಜಗಕೂ ಪ್ರಿಯನು ತಾನು. ನಿಮ್ಮಿಂದ
ಜಗ ಅವರ ಪಡೆಯಿತು. ನಿಮ್ಮ ಪುಣ್ಯದ ಫಲವೆ
ಲೋಕವನು ಅವರ ರೂಪದಲಿ ಸಲಹುತಲಿಹುದು.

**ಯಶೋ —** ಅಂಬಿಕೇ ಸಾಕಿನ್ನು ಸುಮ್ಮನಿರು. ಮೊದಲೆಲ್ಲ

ನನ್ನ ಕಷ್ಟವ ನೋಡಿ ಕನಿಕರಿಸುತಿದ್ದವಳು
ನೀನೆನಗೆ ತತ್ತ್ವವನು ಕಲಿಸುವುದೆ?

**ಅಂಬಿಕೆ —** ಅಮ್ಮಾಜಿ,
ನಿಮಗೆ ನಾನೇನ ಕಲಿಸುವೆನು? ಇಂದಿನವರೆಗೆ
ನನ್ನ ಸಲಹುವ ಒಡತಿ ಎಂದು ಓಲೈಸಿದೆನು.
ಇನ್ನು ಒಡತಿಯಲಿ ಗುರುಪತ್ನಿಯನು ಕಾಣುವೆನು.

**ಯಶೋ —** ನೀನೆನಗೆ ಗುರುಪತ್ನಿ ಪಟ್ಟವನು ಕಟ್ಟುತಿರು.
ಗುರುಮಾತ್ರ ನನ್ನ ಗುರುತಿಸನು. ಏನಂಬಿಕೆ
ರಾಹುಲನ ತೆರದೆ ನೀನೂ ನನ್ನ ಕೈಬಿಟ್ಟು
ಗುರುಗಳನು ಹಿಂಬಾಲಿಸುವೆಯ? ಕನಸಿನೊಳಂದು
ಊಳಿಗದ ಮುಂದಿಯೂ ನನ್ನನುಳಿಯುವರೆಂದು
ಕಾಣಲಿಲ್ಲ.

**ಅಂಬಿಕೆ —** ಮಾಜಿ ನಾನಿಮ್ಮ ಬಿಡುವೆನೆ?
ಯಾವ ಸುಖಕಾಗಿ ಬಿಡಲಿ? ಮುಕ್ತಿಗಾಗಿಯೆ?
ನೀವು ಮನವೊಪ್ಪಿ ಕೈಯೆತ್ತಿ ಕೊಡದಿಹ ಒಂದು
ಲವಲೇಶ ಸುಖವನಾದರು ನಾನು ಒಲ್ಲೆನು.
ಎಳೆಯತನದಿಂದಲೂ ಸೇವೆಯಲಿ ಜೊತೆಗಿದ್ದು
ನೀವು ಬಿಟ್ಟುದನೇ ಪ್ರಸಾದವೆಂದನುಭವಿಸಿ
ಬಾಳುವೆಯ ನಡೆಸಿಹೆನು. ಎರಡನೆಯ ಪಙ್ಕ್ತಿಯಲಿ
ಸುಖಿಸುವುದು ನನಗೆ ಅಭ್ಯಾಸವಾಗಿಹುದವ್ವ.
ಇಂದು ಆತುರಪಡೆನು.

**ಯಶೋ —** ಅಂಬಿಕೆ ಮುಳಿಯದಿರು.
ಅಣ್ಮನನು ನೋಡಲಾಗದೆ ಎಂಬ ಬೇನೆಯಲಿ
ಏನನೋ ನುಡಿದೆನು. ದಿಟವೆಂದು ನೆನೆಯದಿರು.

(ದೂರದಲ್ಲಿ ಕಹಳೆ ಓಲಗ ವೇದಘೋಷ ಜನದ ಗದ್ದಲ ಕೇಳುವುದು.)

**ಅಂಬಿಕೆ —** ಬಿಜಗೆಯ್ದರೊಡೆಯರು.

**ಯಶೋ —** ಎಂಥ ಉದ್ಘೋಷವಿದು!

ಶಾಕ್ಯರಾನಂದಾಬ್ಧಿ ಮೇರೆವರಿದಿಹುದಿಂದು.
ಬಳಿಗೆ ಬರುತಿದೆ ಘೋಷ. ಬೀದಿಗೈತಂದರೆ?

ಅಂಬಿಕೆ — (ಕಿಟಕಿಯ ಬಳಿ ನಿಂತು)
ಹೌದು ಮಾಜೀ.

ಯಶೋ — ಏನು ಸದ್ದೆಲ್ಲ ನಿಂತಿಹುದು?

ಅಂಬಿಕೆ — ಇಲ್ಲಿ ನಿಂದೆಲ್ಲವನು ನೋಡಬಹುದಮ್ಮಾಜಿ.

ಯಶೋ — ನಾನಲ್ಲಿ ನಿಂತು ನೋಡಿದೊಡೆ ಎನ್ನೀ ದೃಷ್ಟಿ
ಆ ದಿವ್ಯ ದೇಹವನು ನೋಕಿ ಇನ್ನೇನಶುಭ
ತಾಗುವುದೊ. ನಾನಲ್ಲಿ ಬಂದು ನೋಡುವುದಿಲ್ಲ.
ನೀನೆನ್ನ ಕಣ್ಣಾಗು. ನೋಡಿದುದ ಬಣ್ಣಿಸು.
ಕಣ್ಣಿನಿಂದೀಂಟುವುದ ಕಿವಿಗಳಿಂದೀಂಟುವೆನು.

ಅಂಬಿಕೆ — ರಾಜವೀಧಿಯ ನಡುವೆ ದಿಬ್ಬಣವ ನಿಲಿಸಿಹರು
ಐದೆಯರು ಬಂದು ಆರತಿಯನೆತ್ತುತಲಿಹರು.

ಯಶೋ — ವಿವರವನು ಒಕ್ಕಣಿಸು. ಅವರೆಲ್ಲಿ ನಿಂದಿಹರು?
ವೇಷ ಭೂಷಣವೇನು? ಬಳಿಯೊಳಾರಾರಿಹರು?

ಅಂಬಿಕೆ — ರಾಜವೀಧಿಯ ತುಂಬ ಹಿಂಗಡೆಗೆ ಊರಜನ
ಕಿಕ್ಕಿರಿದು ನಿಂದಿಹುದು. ಮುಂಗಡೆಗೆ ಎಡಬಲಕೆ
ಸಾಲಾಗಿ ಬಿರುದ ಕಾಪಿನ ಸೇನೆ ನಿಂದಿಹುದು.
ಇತ್ತ ಪಟ್ಟದ ಆನೆ, ಅತ್ತ ಪಟ್ಟದ ಕುದುರೆ;
ನಡುವೆ ಓಲಗದ ಜನ; ಬದಿಯಲೇ ದ್ವಿಜ ತಂಡ;
ಐದೆಯರು ಮಂಗಲದ್ರವ್ಯ ಕನ್ನಡಿ ಕಲಶ
ಆರತಿಯ ತಟ್ಟೆಗಳ ಹಿಡಿದು ನಿಂದಿಹರಲ್ಲೆ.
ಇಷ್ಟು ನೆರವಿಯ ಮಧ್ಯೆ ಗುರುದೇವ ನಿಂದಿಹರು.
ಬಲಕೆ ರಾಜರು, ಅವರ ಜೊತೆಯಲೇ ಅಣ್ಣಯ್ಯ;
ಎಡಕೆ ಜಾಬಾಲಿ ವಾಸಿಷ್ಠ ಗುರುಗಳು; ಅಲ್ಲೆ
ಆನಂದ ಮೊಗ್ಗಲಣ ಸಾರಿಪುತ್ರರು; ಇತ್ತ

ಊರ ಸೌಮಂಗಲಿಯರಾರತಿಯನೆತ್ತುವರೆ
ಮನೆ ಮನೆಯ ಮುಂದೆ ಹರಿವಾಣಗಳ ಹಿಡಿದಿಹರು ;
ಕೆಲರು ಮಕ್ಕಳನು ಮೇಲಕೆ ಎತ್ತಿ ಗುರುಗಳನು
ನೋಡೆಂದು ತೋರುತಿರುವರು. ಕೆಲರು ಬಾಲಕರು
ತಾಯದಿರ ಸೆರಗ ಕೈಯಲಿ ಹಿಡಿದೊ ಬಾಯ್ಬಿಟ್ಟೊ
ಭ್ರಮೆಗೊಂಡರಂಬಂತೆ ನಿಂದಿಹರು.

ಯಶೋ — ಅಣ್ಮ
ಎಂತು ನಿಂದಿಹರು ಎಂತಿಹರು, ಬಣ್ಣಿಸಿ ಹೇಳು.

ಅಂಬಿಕೆ — ಹುಣ್ಣಿಮೆಯ ಆಗಸದಿ ತಾರೆಗಳ ಮಧ್ಯದಲಿ
ತುಂಬಿ ತೊಳಗುವ ಚಂದ್ರನಂತೆ ತೊಳಗುತಲಿಹರು.
ನಮ್ಮ ಪುಷ್ಕರಣಿಯಲಿ ಶ್ರಾವಣದ ಉದಯದಲಿ
ರಾಯತಾವರೆ ಉಳಿದ ತಾವರೆಯ ಬಳಗದಲಿ
ಅರಬಿರಿದು ಬೆಳಗುವವೊಲರೆನಗೆಯೊಳೆಸೆದಿಹರು.
ಹಸುಗೂಸಿನಂತೆ ಮುದ್ದಾಗಿರುವ ಮುಖಮುದ್ರೆ ;
ನಿಮ್ಮ ಮುಖದಲಿ ನನಗೆ ಕಾಂಬ ಕನಿಕರ ಎಳವೆ ;
ಹಿರಿಯ ರಾಜರ ಮುಖದ ಗಾಂಭೀರ್ಯ ಹಿರಿಹಿರಿಮೆ ;
ಲೋಕವನೆ ಆವರಿಸಿ ಸಂರಕ್ಷಿಸುವೆನೆಂಬ
ಕಾರುಣ್ಯರಸ ಒಸರಿ ಹೊಳೆಯುತಿಹ ನಯನಗಳು ;
ಧೀರವಾಗಿಹ ನಿಲುವು ; ತಾವರೆಯ ಬಣ್ಣದಲಿ
ಶೋಭಿಸುವ ಉತ್ತರೀಯ ; ಮಕುಟವೆನೆ ಮೇಲೆ
ಹಿಡಿದೆತ್ತಿ ಕಟ್ಟಿರುವ ಜಟೆ

ಯಶೋ — ಆಹ ಅಂಬಿಕೆ
ಯಾವ ಪುಣ್ಯವಮಾಡಿ ನೀನಿದನು ನೋಡುತಿಹೆ ?
ನಾನೇಕೆ ಮಾಡದಾದೆನೊ ಅದನು ಪೂರ್ವದಲಿ !
ಇಲ್ಲವೇ ಸತಿಯಾದ ನಾರಿ ಸಂನ್ಯಾಸದಲಿ
ಪತಿಯ ನೋಡುವುದು ಸಲ್ಲದು ಎಂಬ ಧರ್ಮದಲೆ

ಮತದಲೇ ತಪ್ಪಿಹುದೊ? ನನಗಿಂತೆ ತೋರುತಿದೆ.
ಇದು ಯಾವ ಮತ ಯಾವ ಧರ್ಮ? ಇದು ತಹುದೇನ?
ಬಾಳುಗಳ ಸೀಳಿ ಮನೆಗಳ ಮುರಿದು ಹೃದಯಗಳ
ಪುಡಿಮಾಡಿ ಕಣ್ಣೀರ ಕಾಲ್ವೆಯಲಿ ಕದಡಿಸುವ
ಈ ಧರ್ಮ ಮತಗಳೇತರ ಧರ್ಮ ಮತಗಳು?
ಲೋಕಗಳ ಶುಭವನಿವು ಸಾಧಿಸುವುವೆನ್ನುವುದು
ಬರಿಯ ಭ್ರಾಂತಿಯ ಮಾತು. ಉಸಿರುಸಿರ ಬೆಸೆವ ಮತ
ಮತವೆನಲು ಒಪ್ಪುವುದು. ಬೆಚ್ಚ ಬೆಸುಗೆಯ ಬಿಡಿಸಿ
ಜೀವಗಳ ಕುದಿಸುವುದು ಮತವೆನಲು ಸಲ್ಲದು.

(ಒಂದು ಕ್ಷಣ ಬಿಟ್ಟು)

ಮುಂದೆ ಬರುತಿರುವರೇ ಅಂಬಿಕೆ?

**ಅಂಬಿಕೆ** — ಅಹುದು.
ಮೆರವಣಿಗೆ ಅರಮನೆಯ ಮುಂಬದಿಯ ಸಾರಿತು.

**ಯಶೋ** — ಅವರೇನ ಮಾಡುತಿರುವರು?

**ಅಂಬಿಕೆ** — ಬಾಗಿ ನಮಿಸುತಿಹ
ಪ್ರಜೆಯ ಹರಸುತಲಿಹರು.

**ಯಶೋ** — ನನ್ನ ಮನಸಿನ ಕಣ್ಣು
ಆದ ವಿಭಾವಿಸಿ ನೋಡಿ ಸಂತೋಷಗೊಳುತಿಹುದು.
ಸಂಜೆವೆಳಗನು ತೊಟ್ಟು ಮುಗಿಲೊಂದ ತಲೆಗಿಟ್ಟು
ಹಿಮಗಿರಿಯ ಶೃಂಗವೊಂದಾಶ್ವೀಜಮಾಸದಲಿ
ತಪ್ಪಲಿನ ವನಗಳನು ಹರಸುವವೊಲಿಹರಹುದು.
ತುರುಗಿ ನಿಂತಿಹ ಜನಸ್ತೋಮದಲಿ ಒಂದು ಮುಖ
ಇಲ್ಲವೆಂಬುದನವರದೃಷ್ಟಿ ಒರೆಯಿತೆ ಮನಕೆ?
ಇಲ್ಲವೇತಕೆ ಎಂದು ಬಗೆ ಇನಿಸು ಕಲಕಿತೇ?
ಹಾ ವಿಧಿಯೆ ಎನ್ನೆದೆಗೆ ಎನ್ನ ಈ ಆಸೆಗಳ
ಭರದ ಓಟವ ತಡೆವ ನೆಲಗಟ್ಟನೀಡದೆ

ಸಡಿಲವಮಾಡಿದೆಯೇಕೆ ಅದನು? ನಾನೇನಾದೆ?
(ಕೈ ಕಣ್ಣಿಗಿಟ್ಟು ದುಃಖಿಸುವಳು. ಮರಳಿ ಸಹಿಸಿಕೊಂಡು,)
ಅಂಬಿಕೆ ಸುಮ್ಮನೆಯೆ ಕುಳಿತೇನಮಾಡುತಿಹೆ?
ಆಣ್ಮನೈತರವಿನೀಮಂಗಳಮುಹೂರ್ತದಲಿ
ಮರುಳೆನ್ನ ಕಣ್ಣಾಶುಭವಾರಿಯನು ಸೂಸುತಿರೆ
ಬೇಡವೆನಬಾರದೇನೇ? ಏಳು ತ್ವರೆಮಾಡು.
ಹರಿವಾಣ ಒಂದ ತಾ; ಅಂಬಿಕೆ. ಅರಸನಿಗೆ
ನಿನ್ನ ಗುರುವಿಗೆ ಅರ್ಪಿಸುವ ಉಪಾಯನಗಳನು
ಅದರೊಳಿಡು.

ಅಂಬಿಕೆ — ಅಪ್ಪಣೆ.

ಯಶೋ — ಅಂತೆ ನನ್ನರಸನಿಗೆ
ಮನವೊಪ್ಪಿ ಚೆಲುವಾದ ನನ್ನ ಅಂದಿನ ವಸ್ತ್ರ
ಅಮೃತರುಚಿ ಚೀನಾಂಬರವನು ತೆಗೆದಿರಿಸು;
ಅವರು ಮನವೊಪ್ಪುವಂದದೊಳಂದುಗೆಯ್ದಂತೆ
ಧಮ್ಮಿಲ್ಲವನು ರಚಿಸು, ಮೆಯ್ಯ ಸಿಂಗರಿಸು.
ಮಂಗಳದ್ರವ್ಯಗಳ ನೀನೊಯ್ದು ನನಗಾಗಿ
ಪಾದದಲಿ ಅರ್ಪಿಸುತಲಿರುವಂದು ನಾನಿಲ್ಲೆ
ನೆನವಿನಲಿ ಪೂಜಿಪೆನು. ನೋಡಬಹುದೆಂಬ ಆ
ಜಡವಸ್ತುನಿಚಯವನು ಅಲ್ಲಿ ಒಪ್ಪಿಸಿಕೊಳುತ
ಅವರ ಮನದಲಿ ನನ್ನ ನೆನವು ಸುಳಿವಾಕ್ಷಣದಿ
ನನ್ನ ಚೇತನಗಳನು ಭಾವನೆಯ ದೇಹವನು
ಇಲ್ಲಿಂದಲೇ ನಾನು ಪದತಲದೊಳಿರಿಸುವೆನು.
ಸಿಂಗರಿಸು ಬಾರ, ಪೂಜೆಯ ಉಪಾಯನಗಳಲಿ
ಹಿರಿಯುಪಾಯನ ದೇಹ ನೈರ್ಮಲ್ಯ, ಅದರಿಂದ
ವಿಮಲಮನ ಅಮಲಾತ್ಮ ಸಿದ್ಧಿಪುವು ಎಂಬರಲೆ.
ಕಡಡಿರುವ ನನ್ನ ಮನ ತಿಳಿಯಾಗುವುದೊ ಏನೊ,

ಬಾ ಬೇಗ ಸಿಂಗರಿಸು. ಹತ್ತು ವರುಷದ ಹಿಂದೆ
ಬಿಟ್ಟು ಎಲ್ಲಿಯೊ ಹೊರಟುಹೋಗಿದ್ದ ಜೀವಕಳೆ
ಮರಳಿ ಬಂತೆಂದು ಶಾಕ್ಯರ ನಾಡು ಉಸಿರೆಳೆದು
ಊರು ಉಕ್ಕಡ ಕಾಡು ನಗರ ಅರಮನೆಯೆಲ್ಲ
ಸಂಭ್ರಮ ಸುಖೋಚ್ಛ್ವಾಸದಿಂದ ತುಂಬಿಹ ವೇಳೆ
ನಾನು ಶೋಕದ ದೀರ್ಘ ನಿಶ್ವಾಸದುಬ್ಬೆಯಲಿ
ಗಳಿಗೆಯನು ಏಕೆ ಬೇಯಿಸಲಿ? ನನ್ನೆದೆಯರಸು
ದೂರ ಹೋಗಿರ್ದವರು ಬಳಿಗೆ ಬಿಜಗೆಯ್ಯುದೇ
ಸಂತೋಷವೆಂಬೆನು. ಬಾ ಏಳು ತ್ವರೆಮಾಡು,

(ರಾಹುಲನೂ ಅಂಬಾಪಾಲಿಯೂ ಪ್ರವೇಶಿಸುವರು.)

ರಾಹುಲ — ಅಮ್ಮಾಜಿ, ನಿಮ್ಮ ನೋಡುವರೆ ಅಂಬಾಪಾಲಿ
ಬಂದಿಹರು (ಎಂದು ಹೇಳಿ ಹೊರಟುಹೋಗುವನು)

ಯಶೋ — ಬರಬೇಕು. ನೀವೆ ಅಂಬಾಪಾಲಿ?

ಅಂಬಾ — ಅಹುದು. ಆ ದಾಸಿ ನಾನೇ. ಬಹಳ ದಿಸದಿಂದ
ಗುರುಪತ್ನಿಯಡಿಯ ಸೇವಿಸುವಾಸೆಯೊಳಗಿರ್ದು
ಇಂದು ಆ ಪುಣ್ಯ ಕೈಸೇರೆ ಬಳಿಸಾರಿಹೆನು.

ಯಶೋ — ಗುರುಗಳಡಿಯನು ಸೇವಿಸುವ ನಿಮ್ಮ ನೋಡುವುದು
ನಮ್ಮನ್ನರದು ಪುಣ್ಯ. ನೀವವರ ಪರಿವಾರ;
ನಾವು ಅವರಿಗೆ ಹೆರರು.

ಅಂಬಾ — ನೀವರಿಯದಿಹ ಮಾತೆ?
ನಮ್ಮ ಗುರುದೇವರಿಗೆ ಮೂರು ಲೋಕದೊಳೆಲ್ಲ
ಹೆರರೆಂಬರೇ ಇಲ್ಲ. ಜಗದ ಜೀವಿಗಳೆಲ್ಲ
ಗುರುಗಳಿಗೆ ಒಂದೇ ಕುಟುಂಬ.

ಯಶೋ — ಅವರನು ಬಲ್ಲ
ಎಲ್ಲರೂ ಇಂತೆ ನುಡಿಯುವಿರಿ. ನೀವವರಲ್ಲಿ
ಉಪದೇಶಪಡೆದಿರಾ?

ಅಂಬಾ — ತಾಯೆ ನಾನಾರೆಂದು
ಏನೆಂದು ನೀವು ಕಾಣಿರಿ. ನಾನು ಪೂರ್ವದಲಿ
ನಾಗರ ಸ್ತ್ರೀಯಾಗಿ ಬಾಳಿದೆನು. ನಿಮ್ಮಂಥ
ಪಾವನರು ಆ ಬಾಳಕಥೆಯು ಕೇಳ್ವುದು ಕೂಡ
ಸರಿಯೆನಿಸಲಾರದು. ಇಂತಿರಲು ಒಂದು ದಿನ
ಗುರುಗಳು ಅನಾಥ ಪಿಂಡಿಕನ ವನಕ್ಕೈತಂದು
ಧರ್ಮವನು ಬೋಧಿಸುತಲಿಹರೆಂಬ ನುಡಿ ಕೇಳಿ
ನಾನಲ್ಲಿ ಹೋದೆನು. ದಾರಿ ತಿಳಿಯದ ಜನಕೆ
ದಾರಿ ಯಾವುದು ಎಂದು ಅವರು ಹೇಳಿದ ಮಾತ
ಕೇಳಿದೆನು. ಅಂದಿನಿಂದವರಡಿಯ ಸೇವೆಯಲಿ
ಎಲ್ಲ ಉಪದೇಶಗಳ ಸಾರವನು ಕಂಡಿಹೆನು.
ಉಪದೇಶಪಡೆವುದಕೆ ಎನಗಾವ ಅರ್ಹತೆ?
ವೇದಪಾರಗರಾದ ವಿಪ್ರರು, ಶಾಸ್ತ್ರದಲಿ
ಈಸಿ ಕಡೆಸಾರಿರುವ ಪಂಡಿತರು, ಯೋಗದಲಿ
ಕರಣಗಳನಾದಿರುವ ತವಸಿಗಳು, ಇವರೆಲ್ಲ
ಗುರುಗಳಲಿ ಉಪದೇಶ ಪಡೆಯುವರು. ಅಲ್ಪಜ್ಞೆ
ಪತಿತೆ ಪಾಮರೆ ನಾನು ಉಪದೇಶ ಪಡೆವುದಕೆ
ಏಸರವಳಾಗುವೆನು? ಆದರೂ ಇದು ದಿಟವು.
ವಿಪ್ರರನು ಶಾಸ್ತ್ರವೇತ್ತರನು ಯುಕ್ತಾತ್ಮರನು
ಮುಂದೆ ನಡೆಯಿಸಬಲ್ಲ ನಮ್ಮ ಗುರು ನಮ್ಮಂತೆ
ಸಾಮಾನ್ಯ ಜನವನೂ ಮುಂಬರಿಸಿ ಪೊರೆಯುವರು.
ಒಂದೆ ಮಾತನು ಆಡಿ ಒಂದು ನೋಟದಿ ನೋಡಿ
ಸರಿಯಾದ ದಾರಿಯಲಿ ನಡೆವುದೊಂದಲ್ಲದೆ
ಉಳಿದೆಲ್ಲ ಬಾಳ್ವೆಯೂ ವ್ಯರ್ಥವೆಂದರಿಸುವರು;
ಉದ್ಧಾರವಾಗುವುದು ಎಂತೆಂದು ತೋರುವರು.
ಬಾಳಕೂಪದಲಿ ದುರ್ವೃತ್ತಿಪಂಕದೊಳಿರ್ದ

ಇವರ ಕೃಪೆಯಿಂದ ಉದ್ಧೃತವಾದ ಹತ್ತಾರು
ಸಾಸಿರದ ಜೀವದಲಿ ನನ್ನದೂ ಒಂದು.

**ಯಶೋ** — ಉಪದೇಶ ಪಡೆದ ಮಹಿಳೆಯರುಂಟೆ ಶಿಷ್ಯರಲಿ?

**ಅಂಬಾ** — ನಾನಾರನೂ ಅರಿಯೆ. ಮಗಧರಾಜರಕುವರಿ
ಗೃಧ್ರಕೂಟದಲಿ ಶುಕ್ಲಾದೇವಿ ಎಂಬಾಕೆ
ಏಕಾಕಿಯಾಗಿ ತಾಪಸ್ಯದೊಳಗಿಹರೆಂದು
ನಮ್ಮ ಗುರುಗಳನು ಗುರುವೆಂದು ಕರೆಯುವರೆಂದು
ಕೇಳಿಹೆನು. ಉಪದೇಶ ಪಡೆದಿಹರೊ ಇಲ್ಲವೊ
ಕಾಣೆನು.

**ಯಶೋ** — ತಾಯಿ ಅಂಬಾಪಾಲಿ ನೀವೆಲ್ಲ
ನಮ್ಮ ನಗರಕೆ ಬಂದುದೆಮಗೆ ಬಹು ಸಂತೋಷ.
ಕಪಿಲವಸ್ತುವನು ಶ್ರಾವಸ್ತಿ ಎಂದೇ ಎಣಿಸಿ
ಇಳಿವ ಬೀಡಾರವನು ನಿಮ್ಮ ಗೃಹವೆಂದೆಣಿಸಿ
ಸತ್ಕಾರದಲಿ ಕಾಂಬ ಕೊರತೆಗಳ ಮನ್ನಿಸಿ
ಆತಿಥ್ಯವನು ಕೊಂಡು ನಮ್ಮ ಸುಖಪಡಿಸಿರಿ.

**ಅಂಬಾ** — ಅಪ್ಪಣೆ. ಎನಗಿನ್ನು ಸತ್ಕಾರಗಳೆ ಬೇಡ
ತಮ್ಮನೂ ತಾವಿರುವ ತಾವನೂ ನೋಡುವುದೆ
ಕಣ್ಣು ಮನಗಳಿಗೊಂದು ಹಬ್ಬವಾಗಿಹುದೆನಗೆ.
ಪ್ರೇಮದಲಿ ತಾವಾಡಿದೆರಡು ಮಾತಿನ ಕರುಣೆ
ಕುಡಿಯಿಡುವಲತೆಗೆರೆದ ಕುಡಿಕೆ ತಿಳಿನೀರಂತೆ
ಒಲಿದೋಡಿಬಂದ ಹಸುಳೆಗೆ ಕೊಟ್ಟ ಹಾಲಂತೆ
ಆಶೆಯಲಿ ಬಳಿಸಾರಿದೀ ಎನ್ನ ಚೇತನಕೆ
ಆಪ್ಯಾಯಮಾನವಾಗಿವೆ ದೇವಿ. ಗುರುಗಳಲಿ
ಯಾವ ಕೃಪೆಯನು ಕಂಡೆನೋ ಅದೇ ಕೃಪೆಯನು
ಗುರುಪತ್ನಿಯಲಿ ಕಂಡು ಆನಂದಿಸುತಲಿಹೆನು.

**ಯಶೋ** — ನಿಮ್ಮೊಳಿಹ ಪ್ರೇಮವೇ ಇನಿತನೂ ತೋರುತಿದೆ.

ಅಂಬಾ — ಮರಳಿ ದರ್ಶನವಕೊಳ್ಳುವೆನು.

ಯಶೋ — ಸಂತೋಷ.

ಅಂಬಿಕೆ ತಟ್ಟೆಯನು ತಂದೆಯಾ?

ಅಂಬಿಕೆ — ಮಾಜೀ

ಇದೊ ತಂದೆ. (ತರುವಳು)

ಯಶೋ — ಕೊಂಡೊಯ್ದು ಅದನವರಿಗರ್ಪಿಸು.

ನಾನು ಇಲ್ಲಿಂದಲೇ ವಂದಿಸುವೆನೆಂದರುಹು.

(ಅಂಬಾಪಾಲಿ ಹೋಗುವಳು)

ಅಂಬಿಕೆ — ಅಪ್ಪಣೆ (ಎಂದು ಬಾಗಿಲಿಗೆ ಹೋಗಿ ಮರಳಿ ಬಂದು)

ಮಾಜಿ, ತಮ್ಮನು ನೋಡಲಿರಬೇಕು

ಅಣ್ಣಯ್ಯ ಆನಂದರನು ಕರೆದು ತರುತಿಹರು.

ಯಶೋ — ಬರಲಿ. ನೀ ನಡೆ.

(ಆನಂದ ರಾಹುಲರು ಬರುವರು)

ಬನ್ನಿ ಆನಂದ ಗುರುಗಳೆ.

ಆನಂದ — ಗುರುಗಳಾನಂದ ಅತ್ತೆಯ ಪದಕೆ ವಂದಿಪೆನು.

ಯಶೋ — ಐದು ವರುಷದ ಹಿಂದೆ ಗುರುವೆಡೆಗೆ ಹೋಹಂದು

ಯಾರಿಗೂ ಹೇಳದೆಯೆ ಹೊರಟುಹೋದಳಿಯನಿಗೆ

ಇಂದು ಅತ್ತೆಯ ನೆನವು ಬಂದಿತೇ? ಶುಭಮಸ್ತು.

ಆನಂದ ಕುಳ್ಳಿರು. ಸೌಖ್ಯವಾಗಿರುವೆಯಾ?

ಅಣ್ಣ ಸುಖವಾಗಿರುವರೇ?

ಆನಂದ — ಅತ್ತೆ ಅವರ ಸುಖ

ಜನಕಾಗಿ ದುಡಿಯುವುದು ನಡೆಯುವುದು ನುಡಿಯುವುದು.

ಈ ಸುಖವನವರು ಪರಿಮಿತಿ ಮರೆತು ಪಡೆದಿಹರು.

ಯಶೋ — ಎಂದಾದರೂ ನಮ್ಮ ನೆನೆವರೇ?

ಆನಂದ — (ಸ್ವಲ್ಪ ಸಾವಕಾಶ ಮಾಡಿ) ಆಗಾಗ

ಅವರ ಬಾಲ್ಯದ ಮಾತನೊಮ್ಮೊಮ್ಮೆ ಹೇಳುವರು;

ಅಂತ ವೇಳೆಯಲಿ ನೆನೆಯುವುದುಂಟು.

ಯಶೋ — ನೆನೆವರೇ ?
ತಂದೆಯನು ? ಪುತ್ರನನು ?

ಆನಂದ — ತಂದೆಯನು ಹಲವುಸಲ
ನೆನೆದಿಹರು ; ಪುತ್ರನನು ಒಮ್ಮೆ ನೆನೆದುದ ಬಲ್ಲೆ.

ಯಶೋ — ನನ್ನನ್ನು ?

ಆನಂದ — ತಮ್ಮನ್ನು ?

ಯಶೋ — ಅಹುದು, ನನ್ನನ್ನು.

ಆನಂದ — ಕಂಡಂತೆ ತಮ್ಮ ಕುರಿತಾಡಿದುದ ನಾನರಿಯೆ.
ಒಮ್ಮೊಮ್ಮೆ ಧರ್ಮಿಷ್ಠೆಯಾದ ಸತಿ ಎಂತಿಹಳು
ಏನಗೆಯ್ವಳು ಎಂದು ವರ್ಣಿಸಿರುವುದ ಬಲ್ಲೆ.
ಆಗ ತಮ್ಮನು ಕುರಿತು ನುಡಿಯುತಿಹರೆಂದೆನಗೆ
ತೋರಿಹುದು.

ಯಶೋ — ಏನೆಂದು ಹೇಳಿಹರು ?

ಆನಂದ — ಸಂಸಾರ
ಏನೆಂಬುದನೆ ಕಾಣದಿಹ ನಾನು ಆ ನುಡಿಗೆ
ಕಿವಿಗೊಟ್ಟುದಿಲ್ಲ. ಏನೆಂದರೋ ನೆನವಿಲ್ಲ.

ಯಶೋ — ನಿಜವ ನುಡಿ. ಇದಕೆ ಸಂಶಯವೇಕೆ ? ಕೇಳಿರಲು
ನೀನದನು ಮರೆಯುವೆಯ ? ಅವರೆನ್ನ ನೆನೆದಿಲ್ಲ.
ಒಳ್ಳಿತು. ಒಬ್ಬಳನೆ ಅರ್ಧರಾತ್ರಿಯೊಳುಳಿದು
ತಪಕೆ ಸಾರಿದವರೆನ್ನನು ನೆನೆಯಬಹುದೆಂತು ?

ಆನಂದ — ಅತ್ತೆ, ಅವರಾರಾತ್ರಿ ಮನೆ ಮಠವ ತೊರೆವಂದು
ನೊಂದ ಪರಿಯನು ಕೇಳೆ ನಮ್ಮ ಮನ ಕರಗುವುದು.

ಯಶೋ — ನೊಂದರೇ ತಾವು ? ನಮ್ಮೆಲ್ಲರನು ನೋಯಿಸಿ ?

ಆನಂದ — ಜಗದ ಹಿತವನು ಸಾಧಿಸುವ ಕಾರ್ಯದಲಿ ಗುರು
ತಮ್ಮ ತನ್ನವರ ಸೌಖ್ಯವನು ಕಡೆಗಣಿಸಿದರು.

ಯಶೋ — ಇರುವ ಮನೆಯನು ಸುಟ್ಟು ಊರ ಬೆಳಗುವರಂತೆ.

ಆನಂದ — ಮನೆಯ ಸುಟ್ಟರೊ ತಮ್ಮ ದೀಪವನು ಕೊಟ್ಟರೋ.
ಊರ ಬೆಳಗಿದುದು ನಿಜ.

ಯಶೋ — ನೀನಿಂತು ಮಾವನಿಗೆ
ವಹಿಸಿಕೊಂಡಾಡುವುದು ಸಹಜ. ಅವರೆಡೆಯಿರ್ದು
ನಾವು ಮಾಡದೆ ಬಿಟ್ಟ ಶುಶ್ರೂಷೆಗಳನೆಲ್ಲ
ಮಾಡುತಿಹೆ. ಸಂತೋಷ; ಯಾರಿಂದಲಾದರೂ
ಆಣ್ಮನಿಗೆ ಸೇವೆ ಸಂದೊಡೆ ಸಾಕು. ಬಹುಜನರು
ಅವರನಾಶ್ರಯಿಸಿಹರೆ?

ಆನಂದ — ಲೆಕ್ಕವಿಲ್ಲದ ಮಂದಿ.
ಅವರ ಹೆಸರನು ಕೇಳಿ ಮನೆ ಮಂದಿಯನು ಬಿಟ್ಟು
ಹೊರಟುಬಂದವರೆನಿತು! ಎಲ್ಲಿಯೋ ಬಂದವರು
ಉಪದೇಶವನು ಕೇಳಿ ಊರಿಗೇ ಹೋಗದೆ
ನಿಂದ ಜನರಿನ್ನೆನಿತು! ಮನೆ ಮಠವ ಬಿಡದಂತೆ
ಸಂಸೃತಿಯದಂದುಗದ ಬಲೆಯ ಕಂಡಿಗಳಿಂದ
ಕ್ಷಣಮಾತ್ರವಾದರೂ ತಲೆಯ ಹೊರಗಡೆಗಿಟ್ಟು
ಬಿಡುಗಡೆಯ ಆಕಾಶವೆಂತಿಹುದು ಎಂಬುದನು
ಕಂಡ ಚೇತನವೆಷ್ಟು? ಯಾರಿದನು ಹೇಳುವರು?
ಈ ಆರು ವರುಷದಲಿ ಇವರ ಉಪದೇಶದಲಿ
ಹತ್ತು ಸಾವಿರ ಮಂದಿ ತ್ಯಾಗವನು ವರಿಸಿದರು.

ಯಶೋ — ಹತ್ತು ಸಾಸಿರ ಮನೆಯ ಬೆಳಕುಗಳು ನಂದಿದುವು;
ಇಲ್ಲವೇ ಮಸಕಾದುವು. ಅಯ್ಯೊ ನನ್ನಂತೆ
ಎಷ್ಟು ಸಾವಿರಮಂದಿ ನೊಂದರೋ. ಇದವೊಂದು
ಹೆಮ್ಮೆಯೆಂದುಸುರುತಿಹೆಯೇ ನೀನು! ಅದು ಸರಿ.
ಹೆಣ್ಣುಸುರಿಗಲ್ಲದಿದರುಮ್ಮಳದ ಅರಿವಹುದೆ?
ಎನಗೆ ರಕ್ಷಕರು ಬೇರೆಯ ಜನರು ಇರ್ದರು.

ನೀನು ರಕ್ಷಿಸಲೆ ಬೇಕೆಂಬ ಜನ ಇರಲಿಲ್ಲ.
ಆದರೂ ನಿಮ್ಮ ಮಾವನು ನೀನು ಹೋದಂದು
ಅರಮನೆಗೆ ಸೆರೆಮನೆಗೆ ಊರಿಗೆ ನಾಡಿಗೆ
ಎನಿತು ಉಬ್ಬಸವಾಯ್ತು. ಇದಕೆ ಮಿಗಿಲಿದ ಎನಿತು
ಬೇಗುದಿಯೊಳೆನಿತು ಹೆಂಡಿರು ನೊಂದು ಬೆಂದರೋ
ನಿಮ್ಮ ಉಪದೇಶದಲಿ! ಇದನೇಕೆ ನೆನೆಯಿರಿ?
ನೋವ ಬೀಜವ ಬಿತ್ತಿ ಹುಲುಸಾದ ಬೆಳೆ ತೆಗೆದು
ಬೇನೆಯನ್ನವ ಬಡಿಸಿ ಕಣ್ಣೀರುಗಳ ಕುಡಿಸಿ
ಹೆಮ್ಮೆಪಡುತಿರುವಿರೇ ತವಸಿಗಳು? ಮನಸಿನಲಿ
ಕಲ್ಮಷಗಳಿಹವೆಂದು ಮನೆಗಳನು ಬಿಟ್ಟೋಡಿ
ಹೆಂಡಿರನು ಮಕ್ಕಳನು ಬೇಯಿಸಲು ತ್ಯಾಗವೇ?
ವನದೊಳಿಹ ಪೊದೆಗಳನು ಜಯಿಸುವೊಡೆ ಕಿಚ್ಚಿಕ್ಕಿ
ಹುಲ್ಲೆಮರಿಗಳ ಸುಡುವ ನೀತಿಯಿದು.
(ಅಂಬಿಕೆ ಪ್ರವೇಶಿಸುವಳು) ಅಂಬಿಕೆ
ಏನಾಯ್ತು? ಇಷ್ಟು ಬೇಗನೆ ಬಂದೆ?

**ಅಂಬಿಕೆ —** (ಆತುರದಿಂದ) ಅಮ್ಮಾಜಿ,
ತಾವು ಗುರುಗಳ ನೋಡಬಹುದಂತೆ.

**ಯಶೋ —** ಅಹುದೆ.
(ಎಂದು ಸಂಭ್ರಮದಿಂದೆದ್ದು ಮರಳಿ ಕುಳಿತು)
ಯಾರು ಹೇಳಿದರು?

**ಅಂಬಿಕೆ —** ಗುರುದೇವರೇ ಹೇಳಿದರು.

**ಯಶೋ —** ಏನು ನಡೆಯಿತು ಹೇಳು.

**ಅಂಬಿಕೆ —** ಹರಿವಾಣವನು ಹಿಡಿದು
ಬಳಿಗೆ ಹೋದೆನು. ಸಾರಿಪುತ್ರರಿಗೆ ಗುರುಗಳು
ಏನನೋ ತಿಳುಹುತಿರ್ದರು. ತಟ್ಟೆಯನು ಅವರ
ಮುಂದಿಟ್ಟು ಮಂಡಿಯೂರಿದೆ ನಾನು. ಅವರದಕೆ

ಒಳ್ಳಿತಾಗಲಿ ಎಂದು, ಏನು ಇದು ಅಂಬಿಕೆ
ಎಂದು ಕೇಳಿದರು. ನಮ್ಮರಸಿಯರು ತಮ್ಮೆಡೆಗೆ
ಈ ಉಪಾಯನಗಳನು ಕಳುಹಿರುವರೆಂದೆನು.

**ಯಶೋ —** ಅಡಿಗಳಿಗೆ ಅರ್ಪಿಸಿದರೆನ್ನ ಬಾರದೆ ಇತ್ತೆ?

**ಅಂಬಿಕೆ —** ಹೆಣ್ಣಾದ ಮಾತ್ರಕೇ ಅಷ್ಟು ಅಗ್ಗವೆ ಮಾಜಿ?
ಅಡಿಯ ನುಡಿ ಅರ್ಪಣೆಯ ನುಡಿ ನಿಮಗೆ ಇಷ್ಟವಿರೆ
ಸತಿಯಾದ ನೀವು ಆಡಿರಿ. ನಾನು ಆಡಲೆ?
ನೀವೆನಗೆ ರಾಣಿ. ನಿಮ್ಮನು ಕಡಿಮೆ ಮಾಡಲೆ?
ಈ ಉಪಾಯನಗಳನು ಕಳುಹಿರುವರೆಂದೆನು.
ಶುಭವುಸ್ತು ಎಂದರು. ಕಳುಹಿದುದು ನೀವೆಂದು
ತಿಳಿಯಿತೋ ಇಲ್ಲವೋ ನಾಕಾಣೆ. ಇದನೆಂತು
ಅರಿಯಿಸುವೆನೋ ಎಂದು ನಾನು ಚಿಂತಿಸುತಿರಲು
ದೂರದೊಳಗಿರ್ದ ಅಂಬಾಪಾಲಿ ಗುರುಗಳಿಗೆ,
ದೇವಿ ಗುರುಪತ್ನಿ ಇಲ್ಲಿಗೆ ಬಂದು ಗುರುಗಳನು
ನೋಡುವುದು ಸರಿಯೊ ಸಲ್ಲದೊ ಎಂಬ ಶಂಕೆಯಲಿ
ತಾವು ತರಲಿಲ್ಲ, ಕಳುಹಿರುವರು, ಎಂದರು.
ಗುರು ಅದಕೆ, ಯಾರಾದರೂ ಇಲ್ಲಿ ಬರಬಹುದು,
ನಾವು ಹೊಗಳುತಲಿರುವ ಧರ್ಮವರ್ತ್ಮನಿಯಲ್ಲಿ
ಇವರು ಬರಬಾರದು ನೋಡಬಾರದು ಅವರು
ಎಂಬ ನಿಯಮನ ನಿಷೇಧಗಳಿಲ್ಲ ಎಂದರು.
ಆಗ ಅಂಬಾಪಾಲಿ ನನ್ನ ಒಂದೆಡೆಗೊಯ್ದು,
ದೇವಿ ಗುರುಗಳ ನೋಡಬಹುದು ಬರಹೇಳಿರಿ
ಸಾರಿಪುತ್ರರ ನಾನು ಕೆಲಕೆ ಕರೆದೊಯ್ಯುವೆನು,
ಎಂದು ಹೇಳಿದರು. ಇದ ನಿಮಗೆ ಬಿನ್ನಯಿಸುವರೆ
ಓಡಿಬಂದೆನು ಮಾಜಿ.

(ಯಶೋಧರೆ ಸುಮ್ಮನಿರುವಳು)

ಸುಮ್ಮನಿರುವಿರೆ ಮಾಜಿ.
ತಳುವಲೇತಕೆ?

ಯಶೋ — ಅಣ್ಣ ಬರಹೇಳು ಎಂದರೇ?

ಅಂಬಿಕೆ — ಬರಲು ತಪ್ಪಿಲ್ಲವೆಂದರು ಮಾಜಿ.

ಯಶೋ — ಆನಂದ
ಅಣ್ಣನಸು ಅಲ್ಲಿ ನೋಡಲೆ?

ಆನಂದ — ಅದಕೆ ಏನಡ್ಡಿ?

ಯಶೋ — ಬರಲಿ ಎಂದೆನಲಿಲ್ಲ. ಬರಹೇಳು ಎನಲಿಲ್ಲ;
ಬರಲು ತಪ್ಪಿಲ್ಲವೆಂದರು. ಎಂತು ಹೋಗುವೆನು?
ಹೋಗಿ ಎದುರಲಿ ನಿಲಲು ನುಡಿಸುವರೊ ನುಡಿಸರೋ?
ಯಾವ ಧೈರ್ಯದೊಳವರ ಬಳಿಸಾರಿ ನಿಲ್ಲಲಿ?

ಆನಂದ — ನುಡಿಸದಿರುವರೆ ಅತ್ತೆ? ತನ್ನವರ ಮನಗಳನು
ಸಂತೋಷಪಡಿಸಲೆಂದೇ ನೂರು ಯೋಜನವ
ನಡೆದುಬಂದಿಹರಲ್ತೆ?

ಯಶೋ — ನೂರು ಯೋಜನದಗಲ
ಸಾಗರಕೆ ಸೇತುವೆಯ ಕಟ್ಟಿ ಸೇನೆಯ ನಡೆಸಿ
ಪ್ರಿಯೆಯನುಳಿದಿರಲಾರೆನೆಂದು ಬಹು ಹಂಬಲಿಸಿ
ಸತಿಗಾಗಿ ಹಗೆಗಳನು ಸದೆದ ಸಾಕೇತಪತಿ
ಸೀತೆಯನು ಬಾರೆಂದು ಕರೆಕಳುಹಿ ಬಂದಂದು
ಮೊಗವನೊಂದೆಡೆಗೆ ತಿರುಹಿದನಂತೆ. ಆನಂದ,
ಈ ಕತೆಯ ನೀಕೇಳಿ ಅರಿಯೆಯಾ? ಸತಿಗಾಗಿ
ಇನಿತ ಮಾಡಿದನೆಂದು ಜನ ನುಡಿವುದೇ ಎಂದು
ನಾಣ್ಕಿವಿದುದಂತೆ. ಆತನ ವರ್ತನೆಯ ನೋಡಿ
ವಶಿಯೆಂದು ಲೋಕ ಮೆಚ್ಚಿತು. ಸತಿಯ ಗತಿಯೇನು?
ಗಂಡು ನಾಚಿತು ಅಣ್ಣ. ನಾಣದೇ ಹೆಣ್ಣು?
ಇಲ್ಲವೇ ತನ್ನುಡೆಯನಿವನು ಧರಿಸಿದನೆಂದು

ಗಂಡುಡೆಯ ತಾನು ಧರಿಸುವುದು ತರವಪ್ಪುದೋ?
ನೂರು ಯೋಜನ ದೇಶದಂತರವ ಕಳೆದವರು
ಮನಸು ಮನಸಿನ ಮಧ್ಯದಭ್ಯಂತರವನಂತೆ
ಉಳಿಸಿಕೊಂಡಿರಬಹುದು.

ಅಂಬಿಕೆ — ಅಮ್ಮಾಜಿ, ಈ ಮೊದಲು
ನೋಡಲಾಗದೆ ಎಂದು ನೊಂದಿರೇ. ನೋಡುವುದು
ದೋಷವಲ್ಲೆಂಬರಲ್ತೆ? ಬಂದು ನೋಡಿರಿ.

ಯಶೋ — ನೋಡುವೆನು ಅಂಬಿಕೆ. ಎಲ್ಲಿಯಾದರು ಕುಳಿತು
ಮರೆಯಿಂದ ನೋಡುವೆನು. ಬಳಿಗೇಕೆ ಸಾರಲಿ?

ಆನಂದ — ಇಂತೇಕೆ ನೆನೆಯುವಿರಿ ಅತ್ತೆ. ಬರಬೇಕೆಂದೆ
ಗುರುಗಳಭಿಮತವೆಂದು ತೋರುವುದು.

ಯಶೋ — ಆನಂದ
ಅಭಿಮತವನೂಹಿಸುವೆವೇಕೆ? ಎನ್ನಾಣ್ಮನನು
ನೋಡಬಹುದೆಂದಾಯ್ತು. ಸಾವಿರದ ಗುಂಪಿನಲಿ
ಎಲ್ಲಿಯೋ ಯಾವಾಗಳೋ ಸೇರಿ ನೋಡುವೆನು.
ಎಲ್ಲರಂತಲ್ಲ ಪೂರ್ವಾಶ್ರಮದ ಸತಿ ಎಂದು
ಕೃಪೆಯ ತೋರುವುದಾಗೆ ಇಲ್ಲಿಗೇ ಬಿಜಗೆಯ್ದು
ನನ್ನ ಸೇವೆಯ ಕೊಳಲಿ.

ಅಂಬಿಕೆ — ಇಂತೆಂಬರೇ ಮಾಜಿ?

ಯಶೋ — ಏನೆಂದೆನಂಬಿಕೆ? ನಗರಿಗೈತಂದಿಹರು;
ಅರಮನೆಗೆ ಬಂದಿಹರು; ನೋಡುವುದು ತಪ್ಪಲ್ಲ;
ಇಲ್ಲಿ ಬರುವುದು ತಪ್ಪೆ, ಕಷ್ಟವೆ? ಬರಬೇಕು.
ನಾನೊಂದು ವಸ್ತುವೆಂದವರು ಎಣಿಸುವುದಾಗೆ
ನಾಹೇಳಲೇಕೆ? ತಾವೇ ಇಲ್ಲಿ ಬರುವರು;
ನೋಡುತಿರು.

ಆನಂದ — ಅತ್ತೆ ಗುರುಗಳಿಗೆ ನಿಮ್ಮರ್ಥವನು

ಯಾರಾದರೂ ಹೇಳಬೇಕು; ಹೇಳದೆ ಇರಲು
ಬರುವರೋ ಇಲ್ಲವೋ?

ಯಶೋ — ನೀ ಹೇಳು ಆನಂದ.
ಅತ್ತೆಯಾಗಿಹ ನಾನು ಅಳಿಯನಾಗಿಹ ನೀನು
ಎಳೆಯತನದಿಂದಲೂ ಜೊತೆಯಲೇ ಬೆಳೆದೆವು.
ತಾಯಲಿ ಚಿಕ್ಕಮ್ಮ, ಬೆಳೆದುದರೊಳಕ್ಕಯ್ಯ,
ಯುವರಾಣಿಯಾದಂದು ಅತ್ತೆ, ಇನ್ನೀಗಳೋ
ಗುರುವಿನಂದಿನ ಪತ್ನಿ; ಇನಿತು ವಿಧದಲಿ ನಾನು
ನಿನ್ನ ಸೇವೆಗೆ ಪಾತ್ರಳಾಗಿಹೆನು. ಗುರುಗಳಿಗೆ
ನನ್ನ ಅಭಿಮತವ ತಿಳುಹುವುದ ನೀಕೈಕೊಂಡು
ಉಪಕಾರಮಾಡು.

ಆನಂದ — ಆಗಲಿ ಅತ್ತೆ ತಿಳುಹುವೆನು.

ಅಂಬಿಕೆ — ಊಳಿಗದ ಹೆಣ್ಣು ಮಾಡುವುದೊಂದು ಅರಿಕೆಯಿದೆ.

ಯಶೋ — ಹೇಳು.

ಅಂಬಿಕೆ — ಗುರುಗಳಿಗೆ ಈ ಮಾತನರುಹುವುದರಲಿ
ಅಪಚಾರವಾಗದಿರಬೇಕು.

ಯಶೋ — ಕೇಳಾನಂದ;
ಹೆಣ್ಣಾದ ಮಾತ್ರಕೇ ಅಗ್ಗವೇ ಎಂದವಳು
ಈಗ ಅಪಚಾರಕಂಜುವಳು.

ಅಂಬಿಕೆ — ಆಗಣ ಮಾತು
ತಗ್ಗಿ ನುಡಿದುದು ತಾಯಿ; ಈಗ ಕಳುಹುವ ಮಾತು
ಸೆಡೆದು ನಿಂತಿರುವಂತೆ ತೋರುವುದು.

ಯಶೋ — ಆನಂದ
ಆಣ್ಮಸಿಗೆ ನನ್ನ ಬಿನ್ನಹವ ಸಲ್ಲಿಸಿ, ಮಾತು
ದರ್ಪದಲಿ ನುಡಿದುದಲ್ಲೆಂದರುಹು. ಇದು ನಿಜ.
ಮೆಲುಹು ಮರೆಸಿದ ಬಿರುಸು ಮೆಲುಹಾಗಿ ತೋರುವುದು;

ಎನಿಸು ಮೆಲುಹಾದರೂ ಮೇಲೆ ಬಿರುಸನು ಹೊದೆಯೆ
ಬಿರುಸಾಗಿ ಕಾಣುವುದು. ಎನಗಹಂಕೃತಿಯಿಲ್ಲ.
ಆಣ್ಮನಿಗೆ ಬೇಡವಾದೆನೆ ಎಂಬ ಬೇಸರಯಲಿ
ನುಡಿದಿಹೆನು. ಸರಿಯಾಗಿ ಬಿನ್ನಯಿಸು.

ಆನಂದ — ಅಪ್ಪಣೆ.

---

# ಸ್ಥಾನ ೬

**ಯಶೋಧರೆಯ ಅಂತಃಪುರ. ಯಶೋಧರೆ ಅಂಬಿಕೆ.**

**ಅಂಬಿಕೆ —** ನೀವು ಹೇಳಿದ ಮಾತ ಆನಂದರಿಂದ ಗುರು
ನಿನ್ನೆಯೇ ಕೇಳಿ ತಿಳಿದಿರಬೇಕು. ಆದರೂ
ಬರುವರೋ ಇಲ್ಲವೋ ತಿಳಿದಿಲ್ಲ.

**ಯಶೋ —** ಇದುವರೆಗೆ
ಬರಲಿಲ್ಲವೆಂದು ತಿಳಿದಿಹುದಲ್ಲ; ಸಾಲದೆ?

**ಅಂಬಿಕೆ —** ಅಮ್ಮಾಜಿ. ನೀವು ಕೋಪಿಸಬೇಡಿ. ದಾಸಿಗಿದು
ಅಧಿಕಪ್ರಸಂಗವೆನಬೇಡಿ. ಈ ಮಧ್ಯಾಹ್ನ
ಊರಜನಕುಪದೇಶ ಹೇಳುವರು ಗುರುಗಳು.
ಸಜ್ಜೆಯಲಿ ಕುಳಿತು ಬೋಧಿಪರಂತೆ. ಪಕ್ಕದಲಿ
ಚಿತ್ರಶಾಲೆಯ ಬಾಗಿಲೆಡೆ ತೆರೆಯ ಮರೆಯಿಂದ
ನೀವು ಅವರನು ನೋಡಿ, ಮಾಜಿ. ನಾಚಿಕೆ ಬೇಡ.
ಹತ್ತುವರುಷದ ದಿವಸ ಅಗಲಿದ್ದು ಬಳಿಸಾರಿ
ಒಂದು ಮನೆಯಲೆ ಇರುತ ಪತಿಯ ನೋಡದೆ ಇಹುದು
ಯಾವ ದೈವಕೆ ಪ್ರೀತಿ? ನೋಡುವರೆ ಆಸೆ ಇದೆ;
ನೋಡಬಹುದೆಂದಿಹರು; ಇನ್ನು ಬಿಡಲೇಕೆ?

**ಯಶೋ —** ಎನ್ನಂತೆ ಆಣ್ಮನೂ ಹತ್ತುವರುಷದ ದಿವಸ
ಅಗಲಿದ್ದು ನಾನಿರುವ ತಾಣಕೇ ಬಂದಿಹರು.
ಆದರೂ ನೋಡಬೇಕೆಂಬಾಸೆಯಲಿ ಸಿಲುಕಿ
ತೊಳಲದಿರುವರು ನೋಡು. ಇವರ ಸತಿಯಾದವಳು
ಇವರಂತೆ ದೃಢಚಿತ್ತಳಾಗಿ ಇರಬೇಕಲ್ತೆ?
ಕೇಸರಿಗೆ ಸತಿಯೆನಿಸಬೇಕೆಂಬ ಜೀವದೆಡೆ
ಹರಿಣಿಯವೊಲಂಜುಕುಳಿಯಾಗಿಹುದು ತಕ್ಕುದೇ?
ಆಸೆಯಿದೆ, ಅವಕಾಶವಿದೆ; ಆದರಾಸೆಯನು

ಮುಂಚ್ಛಪುರೆಯಲಿ ಇಂತು ಸಲಿಸುವುದು ಸರಿಯೆಂದು
ತೋರದಿದೆ. ಇದರಿಂದ ನಾನಂತು ಮಾಡೆನು.

(ಬಾಗಿಲಲ್ಲಿ ಅಂಬಾಪಾಲಿ ಕಾಣುವಳು)

ಬನ್ನಿ ಅಂಬಾಪಾಲಿ.

ಅಂಬಾ — ವಂದಿಪೆನು ದೇವಿಯರೆ.
ಗುರುದೇವರಿತ್ತಲೈತರಲಿಹರು. ಅದ ತಮಗೆ
ಅರುಹಬಂದೆನು.

ಯಶೋ — ತಾಯಿ ತಂಗಿ ಅಂಬಾಪಾಲಿ,
ಎಂಥ ಸಂತಸದ ವಾರ್ತೆಯ ತಂದು ಸಲಹಿದಿರಿ.
ಈ ಹಾರವನು ಕೊಳಿರಿ. ನನ್ನ ಈ ಸಂತಸವ
ಇಮ್ಮಡಿಸಿ.

ಅಂಬಾ — ಗುರುಗಳ ಪ್ರಸಾದವನು ಕೊಳುವಂತೆ
ಇದನು ಕೊಳುವೆನು.

ಯಶೋ — ಅಂಬಿಕೆ, ನನ್ನ ಹೆರಳಿನಲಿ
ಹೂವಿದೆಯೆ ನೋಡು, ಸರಿಮಾಡು, ಚೀನಾಂಬರದ
ಮೇಲು ಸೇಲೆಯನು ಕೊಡು. ಪೀಠವನು ಸರಿಪಡಿಸು.

(ಅಂಬಾಪಾಲಿಯನ್ನು ಕುರಿತು)

ನಿಮ್ಮೊಡನೆ ಹೇಳಿಕಳುಹಿದರೆ?

ಅಂಬಾ — ಆನಂದರನು
ಕರೆದು, ಇಲ್ಲಿಗೆ ಪೋಪ, ಎಂದು ಅಪ್ಪಣೆಮಾಡೆ,
ಕೇಳಿ ನಾನೇ ಇತ್ತ ಅರುಹಬಂದೆನು ದೇವಿ.

ಯಶೋ — ಸಂತೋಷ.

(ಇಷ್ಟು ಹೊತ್ತಿಗೆ ಅಂಬಿಕೆ ಹೆರಳನ್ನು ನೋಡಿ ಸರಿಪಡಿಸಿ ಉತ್ತರೀಯವನ್ನು ತಂದು ಹೊದಿಸುವಳು. ಬುದ್ಧನೂ ಆನಂದನೂ ಬಾಗಿಲಲ್ಲಿ ಕಾಣುವರು.)

ಅಂಬಿಕೆ, ಅಣ್ಣಯ್ಯನನು ಕರೆಸು;
ತಟ್ಟೆಯನು ತಾ.

(ಬುದ್ಧನು ಒಳಗೆ ಬರಲು ತಟ್ಟೆಯನ್ನು ಅಡಿಯಬಳಿ ಇಟ್ಟು ನಮಸ್ಕಾರ ಮಾಡುವಳು)

ಅಡಿಯ ಮುಟ್ಟಬಹುದೇ ಕೇಳು.

**ಬುದ್ಧ —** ಮುಟ್ಟಿದೊಡೆ ತಪ್ಪಲ್ಲ; ಮುಟ್ಟದಿರೆ ಒಳಿತು.

**ಯಶೋ —** ತಪ್ಪಲ್ಲದಿರುವುದೇ ಸಾಕೆನಗೆ.

(ಎಂದು ಪಾದವನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುವಳು.)

**ಬುದ್ಧ —** ದೇವಿಯರು

ಏನಗೆಯ್ವೊಡೆ ಅದುವೆ ಒಳಿತು.

(ಎಲ್ಲರೂ ಒಂದು ಕ್ಷಣ ಮೌನವಾಗಿರುವರು. ಅಂಬಾಪಾಲಿ ಅಂಬಿಕೆ ಒಬ್ಬರಿಗೊಬ್ಬರು ಸನ್ನೆಮಾಡಿಕೊಂಡು ಸ್ವಲ್ಪ ದೂರ ಹೋಗುವರು.)

**ಯಶೋ —** ಆನಂದ,

ಪೀಠವನು ಕೊಡು. ದೇವರಲ್ಲಿ ಮಂಡಿಸಬೇಕು.

**ಬುದ್ಧ —** ಕುಳ್ಳಿರಿ. ಆನಂದ ಕುಳಿತುಕೊ. ದೇವಿಯರು
ನೋಡಕೂಡದೊ ಎಂದು ಸಂಶಯದೊಳಿಹರೆಂದು
ಆನಂದ ಹೇಳಿದನು. ಆ ಸಿಯಮವೆಮಗಿಲ್ಲ.
ಹೋಹೆಡೆಗೆ ಹೋಗುವುದು, ನುಡಿಯುವೆಡೆ ನುಡಿಯುವುದು,
ಎಲ್ಲ ಎಡೆಯಲ್ಲಿಯೂ ಸರಿಯಾಗಿ ನಡೆಯುವುದು,
ಇದ ಕಲಿಯಬೇಕು ಸಂನ್ಯಾಸಿ; ಬಹುದಿನದಿಂದ
ನೋಡದಿರ್ದಿಹರು ನೋಡಲಿ ಎಂದು ಬಂದೆನು.

**ಯಶೋ —** ಬೇಗೆಯಲಿ ಬೆಂದ ಜೀವಕೆ ಇಂದು ತಣ್ಣಾಯ್ತು.
ನಮ್ಮಳಿಯ ಆನಂದನಿಗೆ ನಾನು ಚಿರಋಣಿ.

**ಬುದ್ಧ —** ಬಹುತೆರನ ಯೋಚನೆಯ ಮಾಡಿ ನೊಂದಿಹರೆಂದು
ಆನಂದ ಹೇಳಿದನು. ಚಿಂತೆಯೇ ಕಷ್ಟ.
ಮನೆ ಬಾಗಿಲಿಗೆ ಬರುವ ಹಾವನಟ್ಟುವ ರೀತಿ
ಮನದ ಬಾಗಿಲಿನಿಂದ ಅದನಟ್ಟುತಿರಬೇಕು.
ಅಭ್ಯಾಗತನ ಕಂಡು ಗೃಹಕೆ ಕರೆದೊಯ್ವಂತೆ
ಮನದೊಳೆಡೆಗೊಟ್ಟು ಕುಳ್ಳಿರಿಸಿ ಪೂಜಿಸಲು ಅದು
ದುರ್ವಾಸನಾಗುವುದು.

ಯಶೋ — ಇದ ನಾನು ಅರಿತಿಹೆನು.

ಬುದ್ಧ — ಪತಿ ಈತನೆಂದೆನ್ನ ಜೀವ ಸೂರ್ಯನೊಳಂದು
ಸತಿಯಾದವಳ ಜೀವರಾಜೀವ ಕೆಳೆಗಂಡು
ಮಲರಿತೆಂತಂತೆ ಆ ಪತಿಯಾತ್ಮದಾರಾಮ
ಸತಿಯೊಲುಮೆಯುಸಿರಿನ ವಸಂತ ಮಾರುತನಿಂದ
ನಿದ್ದೆ ತಿಳಿದರಳಿ ತನ್ನೆದೆಯ ಸರುಗಂಪಿನಲಿ
ತನ್ನ ತಾನರಿತುಕೊಂಡುದು. ಇದಕೆ ಸಂಶಯವೆ?
ಆ ಪ್ರೇಮವಂದೆನ್ನ ಹೃದಯಸದ್ಮದೊಳಿಟ್ಟ
ಸರ್ವೋದಯದೊಂದು ನಂದಾದೀಪ ಈಗಳೂ
ಎನ್ನ ಅಂತರ್ಯವನು ತೃಪ್ತಿಯಲಿ ಬೆಳಗುತಿದೆ.
ಇರುಳು ತಮವನು ತಾಗಿ ಬಾಂದಳದ ಚೆಲುವಾಗಿ
ಬೆಳಕ ಬೀರಿದ ತಾರೆ, ಹಗಲು ನೇಸರ ನೆರೆದು,
ಮರೆಯಿಂದ ಜಗವ ಬೆಳಗುವವ್ಪೊಲಾತಣಿವೆನಗೆ
ಸಿದ್ಧಿಯಿಂದೊದವಿದ ಮನಃಪ್ರಸಾದದಿ ಬೆರೆದು
ಬಳಿಸಾರಿ ಬಂದ ಆತ್ಮಗಳ ಸುಖಗೊಳಿಸುತಿದೆ.
ಪತಿಗೆ ಬೇಡದೆ ಹೋದೆನೆಂದು ನೆನೆದುದು ಸಾಕು;
ಚಿಂತೆಯನು ಸಾಧಿಸುವ ಈ ತಪಶ್ಚರ್ಯೆಯನು
ಕೊನೆಮಾಡಿ ಇನ್ನು ಶಾಂತಿಯನರಸಿ.

ಯಶೋ — ಎನ್ನ ಮನ
ಈ ಅನುಗ್ರಹದ ನುಡಿಯಿಂದಲೇ ಶಾಂತಿಯನು
ಪಡೆದಿಹುದು. ಇನ್ನೆನಗೆ ಚಿಂತೆಯೆಂಬುದು ಇಲ್ಲ.

ಬುದ್ಧ— ಯಾವುದೋ ಸಂದೇಹವಿಹುದು.

ಯಶೋ — ತಪ್ಪಾಗದಿರೆ
ಕೇಳುವುದು ಎರಡು ಮಾತಿದೆ.

ಬುದ್ಧ— ಕೇಳಬೇಕು.

ಯಶೋ — ಈಗ ನನ್ನನು ನೋಡಬಹುದೆನಲು ಮನೆ ಬಿಟ್ಟು
ವನಕೆ ಹೋಗುವ ಕಾರ್ಯವೇನಿತ್ತು? ಎಳೆವೆಣ್ಣು,
ಪತಿಯೆ ಪರದೈವ, ಎರೆಯನೆ ತನ್ನ ಸರ್ವಸ್ವ,
ಹಸುಳೆಯೇ ಜೀವ, ಎಂದೊಲವಿನೋಲಾಟದಲಿ
ಸುಖವಾಗಿ ಇದ್ದವಳ ದುಃಖದಲಿ ಮುಳುಗಿಸಿ
ಹೊರಟುಹೋದುದು ಏಕೆ?

(ಬುದ್ಧನು ಸುಮ್ಮನಿರುವನು)

ಆನಂದ, ಕೇಳಿದುದು
ಅಪರಾಧವಾಯಿತೋ?

ಬುದ್ಧ— ಇಲ್ಲ; ಕೇಳಿರಿ.

ಯಶೋ — ಇನ್ನು
ಏನ ಕೇಳಲಿ ನಾನು. ನನ್ನಂತೆ ನೂರು ಜನ
ನೋಯುತಿರುವುದೆ ಎಂದು ನೆನೆದು ನಾ ನೋಯುವೆನು.
ಹೋಹಂದು ನನಗೆ ಹೇಳದೆ ಹೋದುದೇತಕೆ?
ಮುಕ್ತಿಮಾರ್ಗವನರಸಿ ಹೋಹವರು ಸತಿಯರಿಗೆ
ತಿಳಿಸಿ ಹೋಗುವುದಾಗದೆ? ಬೇಡವೆಂಬರು,
ತಡೆವರು, ಎಂದು ಭೀತಿಯೆ? ಧರ್ಮದಲಿ ನಡೆಯೆ
ಸತಿಯಾದವಳು ತಾನು ತಡೆಯಾಗಿ ನಿಲುವಳೇ?

(ಒಂದು ಕ್ಷಣ ಸುಮ್ಮನಾಗುವಳು, ಮರಳಿ)

ಹತ್ತು ವರುಷದ ಮೇಲೆ ಮರಳಿ ಬಿಜಗೆಯ್ದವರ
ಬಿರುಸಾದ ನುಡಿಯಿಂದ ದುಷ್ಕರಿಸುತಿಹೆನಹುದು.

ಬುದ್ಧ— ಇದೆ ಎನಗೆ ಸತ್ಕಾರ. ಸಮಚಿತ್ತನಾಗಿಹೆನು.
ಹೇಳುವುದನೆಲ್ಲ ಸಂತಸದಿಂದ ಕೇಳುವೆನು.

ಯಶೋ — ಲೋಕಕೇ ಧರ್ಮವನು ಕಲಿಸುವರು ಬಂದಿರಲು
ತಿಳಿಯದುದನರುಹಿ ಕಲಿಯುವ ಎಂದೆ ನುಡಿಯುವೆನು.
ಪತಿ ತೆರಳಬಾರದೆಂದೇ ಪತ್ನಿ ತಡೆಯುವೊಡೆ

ಕೆಡೆದು ನಡೆವುದು ಪತಿಗೆ ತಕ್ಕುದೇ? ಎರಡುಸಿರು
ಒಂದಾಗಿ ಬೆರೆವ ಎಂದೊಪ್ಪಿ ಜೊತೆಯಾಗಿರುತ
ಎರಡರಲಿ ಒಂದು ಸಂಬಂಧ ಸಾಕೆನಲಾಗಿ
ಅಲ್ಲಿಗೇ ಅವರ ಒಪ್ಪಂದ ಕೊನೆಯಾಗುವುದೆ?
ಎರಡನೆಯ ಜೀವ ಒಪ್ಪುವ ಮುನ್ನ ದಾಂಪತ್ಯ
ಮುಗಿಯಬಹುದೆಂತು?

ಆನಂದ — (ಎದ್ದು) ನಾ ಸ್ವಲ್ಪ ದೂರದೊಳಿರಲೆ?

ಬುದ್ಧ — ಇಷ್ಟದಂತೆಸಗು.

ಯಶೋ — ಬೇಡ, ಇಲ್ಲಿಯೇ ಇರು.
ಸನ್ಯಾಸಿಪತಿ ಅವನ ಪೂರ್ವಾಶ್ರಮದ ಸತಿ
ಇರ್ವರೇ ಜೊತೆಯೊಳಿದ್ದರು ಎನಲು ಜನತೆಯಲಿ
ಅಲ್ಲಸಲ್ಲದ ಮಾತು ಬರಬಹುದು. ಅಣ್ಣನಿಗೆ
ಇಂತೊಂದಪಖ್ಯಾತಿ ಬರುವಂತೆ ನಡೆಯುವೆನೆ?
ಈಗ ಸಂದಿಹ ಯಶದ ರಜತಗಿರಿ ಮುಗಿಲೇರಿ
ಧವಳಗಿರಿಯಾಗಲಿ, ಜಗಕೆ ಹಿರಿದೆನಿಸಲಿ.
ಅಲ್ಲದೆಯೊ ನಾನು ಕೇಳುವ ಮಾತ ಹಲಜನರು
ಕೇಳುತಿರುವರು. ಅವರ ಸಂಶಯವ ಹರಿಸುವರೆ
ಏನಹೇಳುವುದೆಂದು ನೀನು ಅರಿತಿರಬೇಕು.
ದೂರುವುದಕೆಂದು ನುಡಿವವಳಲ್ಲ ನಾನಿಂತು;
ಧರ್ಮಸೂಕ್ಷ್ಮವನರಿಯಲೆಂದೆ ಕೇಳುತಲಿಹೆನು.

ಬುದ್ಧ — (ಒಂದು ಕ್ಷಣ ಬಿಟ್ಟು)
ಧರ್ಮಸೂಕ್ಷ್ಮವನರಿವ ಮನ ತನ್ನ ಸುಖದಿಂದ
ಧರ್ಮವನು ಅಳೆಯಲಾಗದು. ಮೂಲಸೂತ್ರವಿದು.
ನಾನೆಂಬ ಭಾವನೆಯ ಹೆಚ್ಚಿಸುವ ಬಾಳ್ವದುಕು
ಧರ್ಮಪಥವನು ಬಿಟ್ಟು ಅಲೆಯುತಿದೆ ನಿಶ್ಚಯ.
ಎನ್ನಿಂದ ಅನ್ಯರಿಗೆ ಒಳಿತಾಗಲೆಂಬುದೇ

ಸದ್ಯಃಪ್ರಮಾಣ ಧರ್ಮದೊಳಿರುವೆವೆಂಬುದಕೆ.

(ಒಂದು ಕ್ಷಣ ಸುಮ್ಮನಿರುವನು)

ಸಂಸಾರವೆಂಬ ದುಷ್ಪಾರ ಕೂಪಾರದಲಿ
ಹುಟ್ಟು ಬೆಳೆ ಅಳಿ ಎಂಬ ಆವರ್ತದಲಿ ಸಿಲುಕಿ
ತೊಳಲುತಿಹ ಜೀವವನು ರಕ್ಷಿಸುವುದೆಂತೆಂದು
ತಿಳಿವುದಕೆ ನಾನಂದು ಮನೆಯಿಂದ ತೆರಳಿದೆನು.
ಸಂಸಾರದಲಿ ಹೇಸಿ ವನದ ಶಾಂತಿಯನೆಳಸಿ
ತಪಕೆ ಸಾರಿದೆನಲ್ಲ. ಸುಖವೆನ್ನ ಬಳಸಿತ್ತು.
ಜನದ ಮಂಗಳಕಾಗಿ ಸೌಖ್ಯಗಳ ತೊರೆದೆನು;
ಕಷ್ಟಗಳ ವರಿಸಿದೆನು; ಬೇನೆಯಲಿ ಧುಮುಕಿದೆನು.

(ಇನ್ನೊಂದು ಕ್ಷಣ ಬಿಟ್ಟು)

ಎನ್ನ ಕೈಹಿಡಿದಾಕೆ ಧರ್ಮಿಷ್ಠೆ ದೃಢಚಿತ್ತೆ
ಎಂಬುದನು ಮೊದಲಿಂದ ಬಲ್ಲೆನು; ಸೌಖ್ಯದಲಿ
ಎಂತು ನೆರವಾಗಿ ನಿಂತಳೊ ಅಂತೆ ಧರ್ಮದಲಿ
ನೆರವಪ್ಪಳಾಕೆ ಎಂದರಿವೆನು. ಆದರೂ
ಒಡನೆಯೇ ಒಪ್ಪಲಾರಳು; ಇನ್ನು ತಾಯ್ತಂದೆ
ಮಿತ್ರಜನ ಪರಿವಾರ ಎಲ್ಲವೂ ತಡೆಯುವುದು;
ತಡೆಯೆ ನಿಲಲಾಗದು; ಇನ್ನು ಚರ್ಚೆಗಳೇಕೆ?
ಮಾಳ್ಪುದನು ಮಾಳ್ಪುದು; ಎಂಬ ಭಾವನೆಯಿಂದ
ಪರಿತಾಪತಿಮಿರ ಧೈರ್ಯಜ್ಯೋತಿಯನು ಮುಸುಕಿ
ತರ್ಜಿಸುತಲಿರೆ ಅದಕೆ ಎಡೆಗುಡದೆ ನಡೆದೆನು.

(ಮರಳಿ ಸುಮ್ಮನಿದ್ದು)

ತಿಳಿವ ಸಾಧಿಸೆ ಮನುಜ ವನಕೆ ಹೋಗುವುದೇಕೆ?
ಮನೆಯೊಳಿರಲಾಗದೇ ಎಂಬ ನುಡಿ ಅರ್ಥ ನಿಜ.
ಇಲ್ಲಿದ್ದು ಧರ್ಮದಲಿ ನಡೆವವರು ಇರಬಹುದು.
ತನ್ನ ಮರೆವುದೆ ಧರ್ಮ. ತಾಯಾದ ಉಸಿರೆಲ್ಲ

ಇರ್ದೆಡೆಯೊಳೇ ಇದನು ಸಾಧಿಪುದು. ಇಂತೇ
ಕೋಟಿಜೀವದಲೊಂದುಜೀವ ಪರತೃಪ್ತಿಯಲಿ
ಮುಕ್ತಿಯನು ಸಾಧಿಸುವುದುಂಟು. ಕೋಟಿಯಲೊಂದು.
ಸಾಮಾನ್ಯ ಚೇತನರೊ? ದಿನ ದಿನದ ಬಾಳುವೆಯ
ಕಿರಿಕಿರಿಯ ನಡೆಗಳಲಿ, ಮರುತರಿಂದಲೆಯೆದ್ದ
ಜಲಧಿಯ ತರಂಗಮಾಲೆಯ ನಡುವೆ ತೇಲುತಿಹ
ಬೆಂಡಂತೆ, ಬವಣೆಯಲಿ ಜೀವನವ ಕಳೆವರು.
ಇಂದು ಎನಗಿರುವ ಅನುಭವ ಅಂದು ಇರ್ದುದೇ
ವನಕೆ ತೆರಳುವ ಕಾರ್ಯವಿರಲಿಲ್ಲ. ಆದೊಡೆ
ಅಂದು ಮನೆಯನು ಬಿಟ್ಟು ವನಕೆ ತೆರಳದೆ ನಿಲಲು
ಇಂದಿನನುಭವ ಬರುವ ಬೇರೊಂದು ತೆರನಿಲ್ಲ.
ಆಸವಪ್ರಾಶ್ಯಗಳ ಸೇವಿಸಿದ ದೃಢದೇಹ
ಸೊಂಕ ತಡೆವಂತೆ, ತಪದಿಂದ್ಧ ದೃಢವಾದಾತ್ಮ
ಸಂಸ್ಕೃತಿಯ ನಡುವೆ ನುಳಿದೂ ಶಾಂತವಾಗಿಹುದು.

(ಇನ್ನೊಂದು ಕ್ಷಣಬಿಟ್ಟು)

ಪತಿಯಾದವನು ಸತಿಯ ಸಮ್ಮತಿಯ ಪಡೆಯದೆ
ದಾಂಪತ್ಯವನು ಮುಗಿಸಬಾರದೆಂಬುದು ಸತ್ಯ.
ಆದರೆಮ್ಮಯ ಧರ್ಮದಲಿ ವಿರಾಗವೆ ಮುಖ್ಯ;
ದಾಂಪತ್ಯ ಕೊನೆಯಾಯಿತೆಂಬ ಮಿತಿ ಗೌಣ.
ಸಾಧನವ ಮುಗಿಸಿ ಸತಿ ಇರುವೆಡೆಗೆ ಬರಬಹುದು;
ಧರ್ಮದಲಿ ಎರಡುಸಿರು ಜೊತೆಯಾಗಿ ಇರಬಹುದು;
ಸ್ವಾರ್ಥವನು ಮರೆಯುವರೆ ಅದು ಇದಕೆ ಇದು ಅದಕೆ
ನೆರವಾಗಿ ಗುರುವಾಗಿ ಶುಭವ ಸಾಧಿಸಬಹುದು.

(ಕೊನೆಗೆ)

ನುಡಿದ ನುಡಿ ಮನಕೆ ಸಮ್ಮತವೆ?

ಯಶೋ — ಪತಿ ವರ್ಜಿಸಿದ

ಭಂಗಿತಳು ನಾನೆಂಬ ಭಯವೊಂದು ಹರಿಯಿತು.
ಉಳಿದುದನು ಮನ ಒಪ್ಪದಿಹುದು.

ಬುದ್ಧ — ಇದು ಸಹಜ.
ಹೆತ್ತು ಸಲಹುವುದು ಮಾತೆಯ ಧರ್ಮ. ತೊರೆವುದನು
ಸುಲಭದಲಿ ಒಪ್ಪಲಾರದು ಅವಳ ಚೇತನ.
ಪುರುಷನಾದರು ತನ್ನ ಅಂತರ್ಯವನು ಮಥಿಸಿ
ಇದನರಿಯಬೇಕು. ಅಂತರ್ವೃತ್ತಿಯೆಲ್ಲವೂ
ಶ್ರುತಿ ಸೇರಿ ಒಂದಾಗಿ ಬೆರೆವ ಮೊದಲೀ ಧರ್ಮ
ಮನುಜನಿಗೆ ಒಪ್ಪದು.

(ರಾಹುಲನು ಬರುವನು)

ರಾಹುಲ — ಮಾಜಿ ಬರಹೇಳಿದೆಯ.

ಯಶೋ — ಬಾರಣ್ಣ ನಿಮ್ಮ ತಂದೆಗೆ ನಮಿಸು.

ರಾಹುಲ — ಆಗಳೇ
ನಮಿಸಿದೆನು ಅಮ್ಮಾಜಿ.

ಯಶೋ — ಜಗಕೆ ಗುರುವಾಗಿಹರು.
ಅವರಿಂದ ಉಪದೇಶವನು ಕೊಳು.

ರಾಹುಲ— ಅಣ್ಣಾ
ಉಪದೇಶಮಾಡು.

ಬುದ್ಧ— ಮಗುವನು ಎನಗೆ ಕೊಡುವುದಕೆ
ಮನಸು ಒಪ್ಪುವುದೆ?

ಯಶೋ — ಎನ್ನನು ನೀವು ಬಿಡದಿರಲು
ಜಗವನೇ ನಿಮಗೆ ಬಿಡುವರೆ ನಾನು ಒಪ್ಪುವೆನು.
ನನಗೆ ಉಪದೇಶವನು ಕೊಡಬೇಕು.

ಬುದ್ಧ— ಇದುವರೆಗೆ
ಏನಹೇಳಿದೆನೊ ಅದೆ ಉಪದೇಶ.

ಯಶೋ — ದೀಕ್ಷೆಯನು
ಬೇಡುವೆನು.

ಬುದ್ಧ — ಸ್ತ್ರೀಯರಿಗೆ ದೀಕ್ಷೆ ಎನ್ನುವುದಿಲ್ಲ.

ಯಶೋ — ಜಗದೊಳರ್ಧವ ಬಿಟ್ಟು ಉಳಿದರ್ಧ ಮಾತ್ರಕೇ
ಅನ್ವಯಿಸುವುದು ಧರ್ಮವೇ? ಧರ್ಮಖಂಡವದು ;
ಹೋಳುಮಾಡಿದ ಧರ್ಮ.

ಬುದ್ಧ — ಇದುವರೆಗೆ ಸ್ತ್ರೀಯರಿಗೆ
ದೀಕ್ಷೆಯನು ಕೊಟ್ಟಿಲ್ಲ.

ಆನಂದ — ಗುರುದೇವರಲಿ ಅರಿಕೆ.
ಹೆಣ್ಣಾದ ಮಾತ್ರವೇ ದೀಕ್ಷೆಕೊಡೆವೆನ್ನುವುದು
ಧರ್ಮದಲಿ ಒಂದು ಕುಂದಾಗುವುದು.

ಬುದ್ಧ — ಆನಂದ,
ಆ ಮಾತನಲ್ಲಿ ಬಿಡು.

ಆನಂದ — ನೂರಾರು ಜನರಿದನು
ಬೇಡುತಿರುವರು. ನಮ್ಮ ಧರ್ಮದಲಿ ನಮ್ಮ ಗುರು
ಮೊದಲ ಭಿಕ್ಷುಗಳಾದ ರೀತಿಯಲಿ ಗುರುಪತ್ನಿ
ಮೊದಲ ಭಿಕ್ಷುಣಿಯಾಗಲೆಂದು ನಾವೆಳಸುವೆವು.
ತಾಯಿ, ಅಂಬಾಪಾಲಿ.

ಅಂಬಾ — ಬಂದೆ.

(ಅವಳೂ ಅಂಬಿಕೆಯೂ ಬರುವರು)

ಆನಂದ — ಗುರುದೇವರಲಿ
ಗುರುಪತ್ನಿ ದೀಕ್ಷೆಯನು ಬೇಡುತಿರುವರು ನೋಡಿ.

ಅಂಬಾ — ಇದನು ದಯೆಗೆಯ್ಯಬೇಕೆಂದು ನಾನಡಿಮುಟ್ಟಿ
ಬೇಡಿಕೊಂಬೆನು.

ಆನಂದ — ಎಲ್ಲರೂ ಇಂತೆ ಬೇಡುವರು.

ಬುದ್ಧ — ಸ್ತ್ರೀಯರಿಗೆ ದೀಕ್ಷೆ ಕೊಡುವೊಡೆ ನಾನು ಮೊಳೆಯಿಟ್ಟ
ಧರ್ಮದಾಯುಷ್ಯದಲಿ ಅರ್ಧ ಅಳಿವುದು.

ಯಶೋ — ಆಹ!
ಸ್ತ್ರೀಯೆಂಬುದಿಷ್ಟಲ್ಪವಾಯಿತೇ ?

ಬುದ್ಧ — ಅಂತಲ್ಲ;
ಸ್ತ್ರೀಗೆ ಇದರಿಂದ ಕುಂದಿಲ್ಲ. ಶ್ರಮಣರಿಗೆ
ವ್ರತ ತಪೋನುಷ್ಠಾನ ಕಷ್ಟತರವಾಗುವುದು ;
ಹಲಜೀವ ಸೋಲುವುದು ; ವ್ಯವಹರಣೆ ಕೆಡುವುದು.

ಯಶೋ — ಪುರುಷರನು ಮಾತ್ರ ಸಲಹುವುದಾಗೆ ಒಂದು ಯುಗ ;
ಸ್ತ್ರೀಪುರುಷರನು ಸಲಹೆ ಅರ್ಧ ಯುಗ. ಇರ್ವರೂ
ಮುಕ್ತರಾಗಲಿ, ಅರ್ಧ ಯುಗವೆ ಸಾಕೆಂಬೆನು.

ಅಂಬಾ— ಇದೆ ನಮ್ಮ ಅಭಿಮತ.

ಬುದ್ಧ — ಧರ್ಮವನು ನಿಲಿಸಲು
ಬಹು ಕಠಿನ ನಿಯಮಗಳನಿರಿಸಬೇಕಾಗುವುದು.

ಯಶೋ — ಎಲ್ಲ ನಿಯಮಕು ಒಪ್ಪುವೆವು.

ಬುದ್ಧ — ಅಂತೆ ಆಗಲಿ.

ಯಶೋ — ಬದುಕಿದೆನು ನಾನು. (ವಂದಿಸುವಳು)

ಅಂಬಾ — ಬದುಕಿದೆ ನಾನು (ವಂದಿಸುವಳು)

ಅಂಬಿಕೆ — ನಾನೂ
ಬದುಕಿದೆನು. ಮಾಜಿ ನಾನೂ ಜೊತೆಗೆ ಬರುವೆನು.
(ವಂದಿಸುವಳು ; ರಾಜ, ಸಾರಿಪುತ್ರ ಮುಂತಾದವರು ಬರುವರು.)

ರಾಜ — ಏನು ಇದು ಆನಂದ ?
(ಆನಂದನು ಎಲ್ಲವನ್ನೂ ಹೇಳುವನು.)
ಅಂತೆ ? ಒಳಿತಾಯಿತು.
ತನ್ನಾಣ್ಮ ಸಂನ್ಯಾಸವನು ಕೊಂಡನೆಂಬುದನು
ಕೇಳ್ದಂದೆ ಕಾಷಾಯವಸ್ತ್ರವನು ಧರಿಸಿದಳು.
ಅಂದುತಾನೇ ಧರಿಸಿದಾ ದೀಕ್ಷೆಯನು ಇಂದು
ಗುರುವಾದ ಪತಿಯಿಂದ ಇನ್ನೊಮ್ಮೆ ಪಡೆದಿಹಳು.

ತಾಯಿ, ನಿನ್ನಯ ನೋವ ನೋಡಲಾರದೆ ನಾನು
ಬಹು ನೊಂದೆನಮ್ಮ. ಅದು ಇಂದು ಕೊನೆಯಾಯಿತು.
ಎನಗಿನ್ನು ಚಿಂತೆ ಅನಿತಿಲ್ಲ. ನಿಮ್ಮನು ಕಳುಹಿ
ಒಬ್ಬನೇ ಇರಬೇಕು; ಅದು ಕಷ್ಟವಾಗುವುದು.
ಆದರೂ ನಿಮ್ಮ ಸುಖಕಾಗಿ ಅದ ಸಹಿಸುವೆನು.

ಬುದ್ಧ — ಸದ್ಯದಲಿ ದೇವಿ ಭಿಕ್ಷುಣಿ ಇಲ್ಲಿಯೇ ನಿಂದು
ಹತ್ತು ವರುಷಗಳಿಂದ ಗೆಯ್ದ ತಪವನು ಇಲ್ಲೆ
ಮುಂದುವರಿಸುವರು. ರಾಹುಲನ ನಾನೊಯ್ಯುವೆನು.

ಯಶೋ — (ಅಂಬಿಕೆಗೆ) ಇದೆ ನಿಯಮ ಅಂಬಿಕೆ.

ಅಂಬಿಕೆ — (ಎತ್ತಲೋ ನೋಡುತ್ತಿದ್ದು) ಮಾಜಿ ಏನೆಂದಿರಿ?

ರಾಜ — ರಾಹುಲನ? ಅವನಿಗೂ ದೀಕ್ಷೆಯನು ಕೊಟ್ಟುದೇ?

ಬುದ್ಧ — ರಾಹುಲನ ತಾಯಿ ಅವನಿಗೆ ದೀಕ್ಷೆ ಬೇಡಿದರು;
ಕೊಡುವೆನು.

ರಾಜ — ಎಳೆಸೊಸಿಯ ಕಿತ್ತು ಒಣಗಿಸಿ ಇಂತು
ವಂಶವನು ಮುಗಿಸುವರೆ? ಹಿರಿಯರನು ಕೇಳದೆ
ಎಳೆಯರಿಗೆ ದೀಕ್ಷೆಯನು ಕೊಡಬಾರದೆಂಬೆನು.

ಬುದ್ಧ — ಒಪ್ಪಿದೆನು.

ರಾಜ — ಸಂತೋಷ. ಎನ್ನ ಜೀವಿತದಲ್ಲಿ
ಒಂದು ವರುಷ ಎರಡು ವರುಷದಲಿ ಒಮ್ಮೆ
ಇಲ್ಲಿಗೈತಂದು ಅಗಲಿಕೆಯ ನೋವನು ಹರಿಸಿ
ಸಂತಯಿಸಬೇಕು. ಮನುಜನಿಗೆ ವೃದ್ಧಾಪ್ಯದಲಿ
ಎಳೆಯ ಜೀವನನು, ಅದರಲಿಯು ತನ್ನಿಂದೊಗೆದ
ಎಳೆಯುದನು ನೋಡೆ, ಬಳಿಸಾರುತಿಹ ಮೃತ್ಯುವಿನ
ಭೈರವಸ್ವನ ಒಂದು ಮೃದು ಗೀತದಂತಹುದು.

ಬುದ್ಧ — ಅಂತೆ ಆಗಲಿ; ಬಂದು ಸೇವಿಪೆವು.

ಯಶೋ — ನಾನಿಲ್ಲೆ

ಇರುತಿಹೆನು. ಸುತನಂತೆ ಸುತನ ಈ ಸುತನಂತೆ
ಸೇವಿಸುತ ಇಲ್ಲಿಯೇ ಸಿದ್ಧಿಯನು ಕಾಣುವೆನು.

ರಾಜ — ಸಂತೋಷ ಅಮ್ಮಾಜಿ.

ಯಶೋ — ಎನಗಿಂದಣಾನಂದ
ಅಚ್ಛಿನ್ನವಪ್ಪಂತೆ ಆಶಿಷವ ಕೊಡಬೇಕು.

ರಾಜ — ಅಂತೆ ಆಗಲಿ ತಾಯಿ. ನಿನ್ನ ಮನಸಿನ ಹರುಷ
ಜಗಕೆಲ್ಲ ಹರಡಲಿ; ಸೃಷ್ಟಿಯೇ ಸುಖಿಸಲಿ.

ಅಂಬಾ — ಜಯ ಬುದ್ಧ ಗುರುದೇವ ಜಯ ಶುದ್ಧ ಚಾರಿತ್ರ
ಜಯ ತ್ರಿಲೋಕಾಚಾರ್ಯ ಜಯ ಜಗನ್ಮಿತ್ರ
ಜಯ ಪತಿತ ಪಾವನಾ ಜಯಹೆ ದೀನಾವನಾ
ಜಯ ದೇಶಿಕೇಂದ್ರ ಜಯ ಉದ್ಧಾರಕರ್ತ
ಜಯ ತ್ರೈಭುವನ ಪೂಜ್ಯ ಜಯ ಧವಳ ಕೀರ್ತಿ
ಜಯಹೆ ಪರಮ ಗುರುನಾಥ ಕಾರುಣ್ಯಮೂರ್ತಿ
(ಎಲ್ಲರೂ ಬುದ್ಧನಿಗೆ ನಮಿಸುವರು. ತೆರೆ ಬೀಳುವುದು.)

563-33 ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ